# ತಪೋವಾಣಿ

ಸಂ. 11 ಸಂ. 11 | ನವೆಂಬರ್ 2014 | ರೂ.25


## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು)

ಗೋರ್ಬಚೇವ್ ಕೇವಲ ರಾಜನೀತಿಜ್ಞರಾಗಿರದೆ ಕನಸುಗಾರರನೂ ಆಗಿದ್ದಾರೆ. ಇತ್ತೀಚೆಗೆ ಅವರು ಜಗತ್ತಿನ ಸಮಸ್ಯೆಗಳಿಗೆ ಪರಿಹಾರ ಒದಗಿಸಲು, ವಿಶ್ವಸಂಸ್ಥೆಯ ಆಶ್ರಯದಡಿ ವಿಜ್ಞಾನಿಗಳು ಮತ್ತು ಸಾಂಸ್ಕೃತಿಕ ರಾಯಭಾರಿಗಳಿಂದೊಡಗೂಡಿದ "ಪ್ರಾಜ್ಞರ ಸಲಹಾಸಮಿತಿ"ಯನ್ನು ರಚಿಸಬೇಕೆಂದು ಪ್ರಸ್ತಾಪಿಸಿದರು. ಇಲ್ಲಿ ನಾವು ಅಧ್ಯಾತ್ಮದಲ್ಲಿ ಉತ್ತುಂಗಕ್ಕೇರಿದ ವ್ಯಕ್ತಿಗಳನ್ನೂ ಸೇರಿಸಿಕೊಳ್ಳಬೇಕು; ಗುಂಪುಗಾರಿಕೆ ಹಾಗೂ ಮತಾಂಧತೆಗಳನ್ನು ಮಾತ್ರ ಯೋಚಿಸಬಲ್ಲ ಧರ್ಮಾಧಿಕಾರಿಗಳನ್ನಲ್ಲ, ಆದರೆ ವಿಶ್ವ ಮತ್ತು ಸೃಷ್ಟಿಯ ಬಗ್ಗೆ ಚಿಂತಿಸಬಲ್ಲವರನ್ನು; ಉನ್ನತ ಬುದ್ಧಿಶಕ್ತಿಯೊಂದಿಗೆ ಸಂಪರ್ಕ ಏರ್ಪಡಿಸಿಕೊಂಡು ಅಲ್ಲಿಂದ ಜ್ಞಾನ ಮತ್ತು ಶಕ್ತಿಯನ್ನು ಸಂಗ್ರಹಿಸಬಲ್ಲ ಸಾಮರ್ಥ್ಯವಿರುವಂಥವರನ್ನು. ಅಂಥವರು ಮಾತ್ರ ಜಗತ್ತನ್ನು ಬೆಳಕಿನೆಡೆಗೆ ಕರೆದೊಯ್ಯಬಲ್ಲರು, ಏಕೆಂದರೆ ಜಗತ್ತಿನ ಸಮಸ್ಯೆಗಳು ಗೋಚರಿಸುವುದಕ್ಕಿಂತ ಭಿನ್ನವಾಗಿವೆ. ಪ್ರಪ್ರಥಮವಾಗಿ, ಅವು ವ್ಯಕ್ತಿಗತ ಸಮಸ್ಯೆಗಳು; ದುರಾಸೆ ಮತ್ತು ದ್ವೇಷ; ಹಾಗೂ ಅವುಗಳಿಂದಾಗುವ ಉಳಿದೆಲ್ಲ ಪರಿಣಾಮಗಳು.

ನಿಜವಾಗಿಯೂ ಪ್ರಾಜ್ಞರಾದ ಜನರುಳ್ಳ ಸಲಹಾಸಮಿತಿ ಮಾತ್ರ ಜಗತ್ತನ್ನು ಮುನ್ನಡೆಸಬಲ್ಲುದೇ ವಿನಃ ಸಂಕುಚಿತ ಮನಸ್ಸಿನ ರಾಜಕಾರಣಿಗಳಲ್ಲ.

ಒಬ್ಬ ವ್ಯಕ್ತಿಗೆ ಧ್ಯಾನದಲ್ಲಿ ಗಂಭೀರ ಸಮಸ್ಯೆಗಳಿದ್ದವು. ಧ್ಯಾನ ಮಾಡುವುದು ಅಸಾಧ್ಯವಾದುದಷ್ಟೇ ಅಲ್ಲ, ಆಕೆಯು ಧ್ಯಾನವನ್ನೇ ದ್ವೇಷಿಸಲಾರಂಭಿಸಿದರು. ಋಷಿಗಳಲ್ಲಿ ಪ್ರಸ್ತಾಪಿಸಿದಾಗ, ಅವರು ಒಂದು ವಿಚಿತ್ರ ಕಾರಣವನ್ನು ಬಹಿರಂಗಪಡಿಸಿದರು. ಆಕೆಯ ಹಿಂದಿನ ಜನ್ಮದ ಅಧ್ಯಾತ್ಮದ ಮಾರ್ಗದರ್ಶಿಯು ಒಬ್ಬ ಶ್ರೇಷ್ಠ ಗುರುವಾಗಿದ್ದರು. ಅವರನ್ನು ಆಕೆ ಯಾವುದೋ ಒಂದು ರೀತಿಯಲ್ಲಿ ನೋಯಿಸಿ ಅವಮಾನಿಸಿದ್ದರು. ಅದೀಗ ಆಕೆಯ ಪ್ರಗತಿಗೆ ಅಡ್ಡಿಯಾಗುತ್ತಿತ್ತು!

ಆ ಗುರುವು ಯಾವುದೋ ಒಂದು ದೂರದ ಭೂಮಿಯಲ್ಲಿ ತಪಸ್ಸು ಮಾಡುತ್ತಿರುವುದನ್ನು ಋಷಿಗಳು ಕಂಡುಕೊಂಡರು. ಅವರು ಆ ರಾತ್ರಿ ಈ ಧ್ಯಾನಿಯನ್ನು ಆ ಗುರುವಿನ ಬಳಿ ಕರೆದೊಯ್ದಾಗ, ಸಮಾಧಿಯಿಂದೆದ್ದ ಗುರು ಅಚ್ಚರಿ ವ್ಯಕ್ತಪಡಿಸಿದರು. ಅವರಿಗೆ ತಾನು ಅವಮಾನಿತನಾಗಿದ್ದುದು ತಿಳಿದೇ ಇರಲಿಲ್ಲ! ಅವರು ಕ್ಷಮೆ ಯಾಚಿಸಿ, ತನ್ನ ತಪಶ್ಶಕ್ತಿಯ ಒಂದು ಭಾಗವನ್ನು ಆಕೆಗೆ ದಾನ ಮಾಡಿ, ಸಾಧನೆಯಲ್ಲಿ ಸಫಲತೆ ಉಂಟಾಗುವಂತೆ ಹರಸಿದರು. ಆನಂತರ ಆಕೆಯ ಧ್ಯಾನದ ಸಮಸ್ಯೆಗಳೆಲ್ಲವೂ ಮಾಯವಾದವು.

ಸಾಧಕರಿಗೆ ಸಹಾಯಮಾಡಲು ಋಷಿಗಳು ಯಾವ ಮಟ್ಟಕ್ಕೆ ಹೋಗುತ್ತಾರೆ? ಯಾವ ಮಟ್ಟಕ್ಕೂ!

ಸಾಧಕರಿಗೆ ನಡವಳಿಕೆಯ ನಿಯಮಗಳನ್ನು ನಿರ್ದೇಶಿಸುವ ಸಂಪ್ರದಾಯವಿರುವ ಯಾವುದೇ ಪಂಥವನ್ನು ಕಟ್ಟದಿರುವಂತೆ ನಾನು ಜಾಗರೂಕನಾಗಿದ್ದೇನೆ. ನಾನು ಸಮಗ್ರ ಸ್ವಾತಂತ್ರ್ಯದಲ್ಲಿ ನಂಬಿಕೆಯಿರಿಸಿದ್ದೇನೆ. ಸ್ವತಂತ್ರತೆಯಲ್ಲಿ ಮಾತ್ರ ಜನರು ಅರಳಲು ಸಾಧ್ಯ. ಹೊಸ ತತ್ವಗಳನ್ನು ಮತ್ತು ತಂತ್ರಗಳನ್ನು ಪರಿಚಯಿಸುವುಕ್ಕೆ ಮಾತ್ರ ನನ್ನನ್ನು ನಾನು ಸೀಮಿತಗೊಳಿಸಿಕೊಂಡು ಉಳಿದದ್ದನ್ನು ಸಾಧಕರಿಗೆ ಬಿಟ್ಟಿದ್ದೇನೆ. ಶಿಸ್ತನ್ನು ಅವರೇ ರೂಢಿಸಿಕೊಳ್ಳಬೇಕು, ಅದು ಅತ್ಯವಶ್ಯ. ಆಯ್ಕೆ ಮಾಡಲು, ನಿರ್ಧರಿಸಲು, ಬೆಳೆಯಲು ಅವರು ಸ್ವತಂತ್ರರು!

ಒಬ್ಬರು ನನ್ನನ್ನು, "ನಿಮ್ಮ ಜೀವನದ ಧ್ಯೇಯವು ಈಡೇರಿತೇ?" ಎಂದು ಕೇಳಿದರು. ಅದರ ಬಗ್ಗೆ ಆಳವಾಗಿ ಚಿಂತಿಸಿದಾಗ ನನಗೆ ನನ್ನ ಗುರುವಿನ ಮಾತುಗಳು ನೆನಪಾದವು: ಸೃಷ್ಟಿಯಿರುವವರೆಗೆ ಋಷಿಗಳ ಕೆಲಸ ಮುಂದುವರಿಯುತ್ತಿರುತ್ತದೆ. ಅದಕ್ಕೆ ನಮ್ಮ ಕೊಡುಗೆ ಏನೆಂಬುದರ ಬಗ್ಗೆ ಮಾತ್ರ ನಾವು ಚಿಂತಿಸಲು ಸಾಧ್ಯ.

ನನಗೆ ಧ್ಯೇಯವು ಈಡೇರಿದ ಅನುಭವವಾಗುತ್ತಿಲ್ಲ. ಆದರೆ ನಾನೇನು ಮಾಡಲು ಸಾಧ್ಯವಾಯಿತೋ ಅದರ ಬಗ್ಗೆ ನನಗೆ ಸಂತೋಷವಿದೆ. ಕೆಲಸವು ನನಗೆ ಕಲಿಸಿದ ಪಾಠದ ಬಗ್ಗೆ ನನಗೆ ಸಂತೋಷವಿದೆ. ಅದರ ಬಗ್ಗೆ ನನಗೆ ವ್ಯಥೆಯಿಲ್ಲ, ದ್ವೇಷವಿಲ್ಲ, ಆಸೆಯಿಲ್ಲ, ದುಃಖವಿಲ್ಲ, ದೂರು ಇಲ್ಲ. ನನ್ನಲ್ಲಿ ಅಪಾರ ಪ್ರೀತಿ ತುಂಬಿದೆ.

### ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

**ಬೆಳಕು**

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

**ಜ್ಯೋತಿಕಾರ್ಯ**

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

**ಜ್ಯೋತಿಜೀವಿಗಳು**

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

**ಸಪ್ತಋಷಿಗಳು**

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

**ಮಹರ್ಷಿ ಅಮರ**

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

**ಗುರೂಜಿ ಕೃಷ್ಣಾನಂದ**

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

**ಸಪ್ತಋಷಿ ಧ್ಯಾನಯೋಗ**

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

**ಪ್ರಮಾಣಗಳು**

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.


ಮಾನಸ ಫೌಂಡೇಶನ್ (ರಿ)

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560077. ಭಾರತ.

✆ (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 4)

ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಅಕ್ಟೋಬರ್ 3ರಂದು ತಪೋನಗರದ ನಿವಾಸಿಗಳು ತಮ್ಮ ವಾಹನಗಳನ್ನು ಚೈತನ್ಯೀಕರಿಸುವ ಮೂಲಕ ಆಯುಧ ಪೂಜೆಯನ್ನು ಆಚರಿಸಿದರು.

### ಸುದ್ದಿ-ಸೂಚನೆ

- 23-11-2014 ರಂದು ತಪೋನಗರದಲ್ಲಿ ಗುರೂಜಿಯವರ ಮಹಾಸಮಾಧಿ ದಿನದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ಹೆಸರನ್ನು ದಿನಾಂಕ 20-11-2014 ರೊಳಗೆ ಮಾನಸ ಕಚೇರಿಯಲ್ಲಿ ರಿಜಿಸ್ಟರ್ ಮಾಡಬೇಕಾಗಿ ವಿನಂತಿ.
- ನಮ್ಮ "Doorways to Light" ಪುಸ್ತಕದ ಇಲೆಕ್ಟ್ರಾನಿಕ್ ರೂಪಾಂತರವಾದ ಇ-ಪುಸ್ತಕವನ್ನು, 23-11-2014 ರಂದು ತಪೋನಗರದಲ್ಲಿ ನಡೆಯುವ ಗುರೂಜಿಯವರ ಮಹಾಸಮಾಧಿ ದಿನದ ಕಾರ್ಯಕ್ರಮದ ಸಂದರ್ಭದಲ್ಲಿ ಬಿಡುಗಡೆ ಗೊಳಿಸಲಾಗುವುದು. ಈ ಇ-ಪುಸ್ತಕವು ನಮ್ಮ ವೆಬ್‌ಸೈಟ್ www.lightagemasters.com ನಲ್ಲಿ ಕೊಂಡುಕೊಳ್ಳಲು ಲಭ್ಯವಿದೆ.
- 23-11-2014 ರ ಕಾರ್ಯಕ್ರಮದ ಸಮಯದಲ್ಲಿ, ವಿಚಾರಣಾ ಕೇಂದ್ರ ಮತ್ತು ಲೈಟ್ ಚಾನಲ್ ಕೆಲಸಕ್ಕಾಗಿ ಕಚೇರಿಯನ್ನು ಒಳಗೊಂಡಿರುವ ಹೊಸ ಕಟ್ಟಡವನ್ನು ಉದ್ಘಾಟಿಸಲಾಗುವುದು.
- 2015ನೇ ಇಸವಿಯ ಡೆಸ್ಕ್ ಕ್ಯಾಲೆಂಡರ್ ಅನ್ನು 23-11-2014 ರ ಕಾರ್ಯಕ್ರಮದ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಗುವುದು. ಆಸಕ್ತ ಸಾಧಕರು ತಮ್ಮ ಪ್ರತಿಗಳಿಗಾಗಿ ಮಾನಸ ಆಫೀಸಿನಲ್ಲಿ ದಿನಾಂಕ 15-11-2014ರೊಳಗೆ ರಿಜಿಸ್ಟರ್ ಮಾಡಬಹುದು.
- 2015ರಲ್ಲಿ ಪ್ರಾರಂಭವಾಗುವ ಶಂಬಲ ಗ್ರೂಪ್‌ನ ಹೊಸ ಬ್ಯಾಚ್‌ಗೆ ಸೇರಬಯಸುವ ಸಾಧಕರು, 31-12-2014 ರೊಳಗೆ ಮಾನಸ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬಹುದು. ದೂರಕಲಿಕೆಯ ಸಾಧಕರು ಕೂಡ ಸೇರಬಹುದು. ಈಗಿನ ಶಂಬಲ ಗ್ರೂಪ್ ಸಾಧಕರು ಕೂಡಾ ತಮ್ಮ ನೋಂದಣಿಯನ್ನು ನವೀಕರಿಸಿಕೊಳ್ಳಲು ತಮ್ಮ ಹೆಸರನ್ನು 31-12-2014 ರೊಳಗೆ ರಿಜಿಸ್ಟರ್ ಮಾಡಬೇಕಾಗಿ ವಿನಂತಿ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಭಾನು | ಶುಕ್ಲ ದಶಮಿ |
| 06 | ಗುರು | ಪೂರ್ಣಿಮಾ |
| 15 | ಶನಿ | ಕೃಷ್ಣ ಅಷ್ಟಮಿ |
| 20 | ಗುರು | ಮಾಸ ಶಿವರಾತ್ರಿ |
| 22 | ಶನಿ | ಅಮಾವಾಸ್ಯೆ |
| 23 | ಭಾನು | ಗುರೂಜಿಯವರ ಮಹಾಸಮಾಧಿ ದಿನ |
| 29 | ಶನಿ | ಶುಕ್ಲ ಅಷ್ಟಮಿ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11-12<br>ಲೈಟ್ ಚಾನಲಿಂಗ್:<br>ಮಧ್ಯಾಹ್ನ 12-1 |
| 09-11-2014 | ಮಧ್ಯಾಹ್ನ 2ಕ್ಕೆ<br>ಶಂಬಲ ಗ್ರೂಪ್ ಸಂಧಿಸುತ್ತದೆ |
| 16-11-2014 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್<br>ಸಂಧಿಸುತ್ತದೆ |
| 23-11-2014 | ಗುರೂಜಿಯವರ ಮಹಾಸಮಾಧಿ<br>ಕಾರ್ಯಕ್ರಮ |
| 30-11-2014 | ಅಖಂಡ ಧ್ಯಾನ :<br>ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 |

### ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ
**ಭಾನುವಾರ, 23-11-2014**

| | |
|---|---|
| ಬೆಳಿಗ್ಗೆ 11 | ಸ್ವಾಗತ<br>ಭಾಷಣಗಳು<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30 | ಪ್ರಸಾದ |

### ಆನೇಕಲ್‌ನಲ್ಲಿ ಕಾರ್ಯಕ್ರಮ

24-11-2014ರಂದು ಸಾಯಂಕಾಲ 6 ಘಂಟೆಗೆ ಆನೇಕಲ್‌ನಲ್ಲಿರುವ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

## ಲೈಟ್ ಚಾನಲಿಂಗ್ ಅನುಭವಗಳು

ಒಬ್ಬ ವ್ಯಕ್ತಿ ತಾನು ರಾತ್ರಿ ನಿದ್ರಿಸುತ್ತಿರುವಾಗ ಭಯದಿಂದಾಗಿ ಇದ್ದಕ್ಕಿದ್ದಂತೆ ಎಚ್ಚರಗೊಳ್ಳುವ ಸಮಸ್ಯೆಯೊಂದಿಗೆ ನನ್ನ ಬಳಿ ಬಂದರು. ಅವರಿಗೆ ಈ ಸಮಸ್ಯೆಯು ಬಾಲ್ಯದಿಂದಲೇ ಇತ್ತು. ನಾನು ಅವರಿಗೆ ಲೈಟ್ ಚಾನಲಿಂಗ್ ಪರಿಚಯಿಸಿದೆ. ಲೈಟ್ ಚಾನಲಿಂಗ್ ಮಾಡಲು ಆರಂಭಿಸಿದ ನಂತರ ಅವರಲ್ಲಿದ್ದ ಭಯ ನಿವಾರಣೆಯಾಯಿತು. ಈಗ ಅವರು ಮಾನಸ ಕುಟುಂಬದ ಭಾಗವಾಗಿದ್ದಾರೆ ಮತ್ತು ತಮ್ಮೆಲ್ಲಾ ಸಮಸ್ಯೆಗಳಿಂದ ಮುಕ್ತರಾಗಿದ್ದಾರೆ.

– ಶ್ರೀಮತಿ ಮೃದುಲಾ ಮಲ್ವಾನಿ, ದೂರಕಲಿಕೆಯ ವಿದ್ಯಾರ್ಥಿ

ಲೈಟ್ ಚಾನಲಿಂಗ್ ಮಾಡಿದ ನಂತರ ಈಗ ನನ್ನ ಮನಸ್ಸಿನಲ್ಲಿ ಅತ್ಯಂತ ಶಾಂತತೆಯಿದೆ. ನಾನು ಸಂಪೂರ್ಣವಾಗಿ ಇದರಲ್ಲಿ ಮಗ್ನಳಾಗಿದ್ದೆ ಮತ್ತು ಎಲ್ಲಿಂದಲೂ ಯಾವುದೇ ತೆರನಾದ ಶಬ್ದವು ಕೇಳಿಸುತ್ತಿರಲಿಲ್ಲ. ಇದೊಂದು ಅತ್ಯುತ್ತಮವಾದ ಅನುಭವ. ನಮಗೆ ಈ ತಂತ್ರವನ್ನು ಕಲಿಸಿಕೊಟ್ಟಿದ್ದಕ್ಕೆ ಧನ್ಯವಾದಗಳು.

– ಶ್ರುತಿ. ಸಿ., 10ನೇ ತರಗತಿ, ಕ್ರೈಸ್ಟ್ ಶಾಲೆ, ಕಗ್ಗಲೀಪುರ, ಬೆಂಗಳೂರು

ಈ ತಂತ್ರದ ಅಭ್ಯಾಸದ ಸಮಯದಲ್ಲಿ, ನಾನು ನನ್ನ ಪರಿಸರದ ಪ್ರಭಾವಕೊಳ್ಳಗಾಗದ ಪರಿಶುದ್ಧ ಮೌನದಲ್ಲಿದ್ದೆ. ಈ ಅಭ್ಯಾಸವು ಜಾತಿಭೇದವನ್ನು ತೆಗೆದು ಹಾಕುತ್ತದೆ.

– ಪ್ರಿಯಾ, 7ನೇ ತರಗತಿ, ಪಡೂರ್ ಮಾಧ್ಯಮಿಕ ಶಾಲೆ, ಚೆನ್ನೈ

ಲೈಟ್ ಚಾನಲಿಂಗ್ ಕೂಡಾ ನಮ್ಮ ಶಾಲೆಗಳಲ್ಲಿರುವ ಇತರ ಪಠ್ಯವಿಷಯಗಳಷ್ಟೇ ಉತ್ತಮವಾಗಿದೆ. ನಾವು ಪಠ್ಯಕ್ರಮಗಳಷ್ಟೇ ಮಹತ್ವವನ್ನು ಇದಕ್ಕೂ ನೀಡುತ್ತೇವೆ. ಇದರಿಂದಾಗಿ ನಮ್ಮ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಬದಲಾವಣೆಗಳನ್ನು ಗಮನಿಸಿದ್ದೇವೆ. ಅವರ ಏಕಾಗ್ರತೆ ಉತ್ತಮಗೊಂಡಿದೆ ಹಾಗೂ ಈಗ ಅವರು ಹೆಚ್ಚು ಶಿಸ್ತುಬದ್ಧರಾಗಿದ್ದಾರೆ. ಲೈಟ್ ಚಾನಲಿಂಗ್ ನಮಗೆ ಅತ್ಯಂತ ಉಪಯುಕ್ತವಾಗಿದೆ. ಅದರ ಅಭ್ಯಾಸ ಮಾಡುವುದು ನಮಗೆ ಸಂತೋಷವನ್ನುಂಟುಮಾಡಿದೆ.

– ಶ್ರೀಮತಿ ಸುನೀತಾ, ಮುಖ್ಯೋಪಾಧ್ಯಾಯಿನಿ, ವಾತ್ಸಲ್ಯ ಪ್ರಾಥಮಿಕ ಶಾಲೆ, ಬೆಂಗಳೂರು

ಕರುಳಿನ ಸೋಂಕಿನಿಂದಾಗಿ ಜುಲೈ ತಿಂಗಳ ಕೊನೆಯ ಎರಡು ವಾರಗಳಲ್ಲಿ ನಾನು ವಿಪರೀತವಾದ ಹೊಟ್ಟೆನೋವಿನಿಂದ ಬಳಲುತ್ತಿದ್ದೆ. ಆಗಸ್ಟ್ 2ನೇ ತಾರೀಖಿನಂದು ನಾನೊಂದು ಶಾಲೆಯಲ್ಲಿ ಲೈಟ್ ಚಾನಲಿಂಗ್ ಸೆಷನ್ ನಡೆಸಿಕೊಟ್ಟೆ. ಹೆಚ್ಚಿನ ಚೈತನ್ಯಗಳಿಂದ ಕೂಡಿದ್ದ ಆ ಸೆಷನ್ ಅತ್ಯಂತ ಶಾಂತಿದಾಯಕವಾಗಿತ್ತು. ಎಲ್ಲವೂ ಹೇಗೆ ನನಗರಿವಿಲ್ಲದಂತೆ ನಡೆಯಿತು ಎಂಬ ಆಶ್ಚರ್ಯದಿಂದ ನಾನು ಮನೆಗೆ ಹಿಂತಿರುಗಿದೆ. ಆಗ ಇದ್ದಕ್ಕಿದ್ದಂತೆಯೇ, ನನ್ನ ಶರೀರದಲ್ಲಿ ಕೆಂಪು ಗುಳ್ಳೆಗಳು ಕಾಣಿಸಿಕೊಂಡು, ತುರಿಕೆಯುಂಟಾಗಲು ಆರಂಭವಾಯಿತು. ಇದರಿಂಗಾಗಿ ಮುಂದಿನ ಐದು ಗಂಟೆಗಳ ಕಾಲ ನಾನು ಈ ಅಲರ್ಜಿಯಿಂದ ಕಷ್ಟಪಟ್ಟೆ. ಆಶ್ಚರ್ಯವೆಂದರೆ, ಆ ದಿನ ಸಂಜೆ ಹೊತ್ತಿಗೆ ಎಲ್ಲಾ ಸರಿಹೋಗಿ, ನನಗೆ ಆರಾಮವೆನಿಸಿತು. ನನ್ನ ಶರೀರವು ಅತ್ಯಂತ ಹಗುರ ಮತ್ತು ಶಾಂತಿಯುತವಾಗಿತ್ತು. ಅಂದು ರಾತ್ರಿ ಎರಡು ವಾರಗಳ ನಂತರ ಯಾವುದೇ ನೋವಿಲ್ಲದೆ ನಾನು ಶಾಂತವಾಗಿ ನಿದ್ರಿಸಿದೆ. ಲೈಟ್ ಚಾನಲಿಂಗ್ ಕಾರ್ಯಕ್ರಮದಿಂದ ಮರಳಿದ ನಂತರ ನನ್ನೆಲ್ಲಾ ನಕಾರಾತ್ಮಕತೆಗಳು ಮತ್ತು ನೋವುಗಳು ಶರೀರದಿಂದ ಹೊರಗೆ ಬಂದವೆಂದು ನನಗೆ ಅರ್ಥವಾಯಿತು.

– ಅನಿತಾ ಕೆ.ಎ., ಕಾರ್ಯಕರ್ತೆ

## ತಪೋನಗರ ಡೈರಿ

**ಸೀಮಾ ಅಲ್‌ವೇಲ್; ಅನು: ವರ್ಷಾ ದೀಪಕ್**

ತಪೋನಗರದ ಮಕ್ಕಳ ಉದ್ಯಾನದಲ್ಲಿದ್ದ ಬೃಹತ್ತಾದ ಒಂದು ಮರವನ್ನು ಪ್ರಕೃತಿಯು ಉರುಳಿಸಿತು. ಆ ಎತ್ತರದ ವಯಸ್ಸಾದ ಮರವು ಒಳಗಿನಿಂದ ಒಣಗಿತ್ತು. ಅದೃಷ್ಟವಶಾತ್, ಬಿರುಸಾದ ಮಳೆ ಮತ್ತು ಗಾಳಿಗಳಿಂದಾಗಿ ಅದು ಸುತ್ತಮುತ್ತ ಯಾರೂ ಇಲ್ಲದ ರಾತ್ರಿಯ ಸಮಯದಲ್ಲಿ ನೆಲಕ್ಕೆ ಅಪ್ಪಳಿಸಿತು. ಪಕ್ಕದಲ್ಲಿದ್ದ ಬಸ್ ನಿಲ್ದಾಣದ ಸೂರು ಕುಸಿಯಿತು ಮತ್ತು ಗೋಡೆಗಳು ಚೂರುಚೂರಾಗಿ ಬಿದ್ದವು. ಈ ಭಗ್ನಾವಶೇಷಗಳ ವಿಲಕ್ಷಣ ದೃಶ್ಯವು ತಪೋನಗರಕ್ಕೆ ಕೊಂಚ ದುಃಖವನ್ನುಂಟುಮಾಡಿತು; ಏನೇ ಆದರೂ ಈ ಮಕ್ಕಳ ಉದ್ಯಾನದಲ್ಲಿ ಹಳ್ಳಿಯ ಮಕ್ಕಳು ಸಂತಸದಿಂದ ಆಟವಾಡುವ ದೃಶ್ಯವು, ಗುರೂಜಿಯವರಿಗೆ ಹೆಚ್ಚಿನ ಸಂತೋಷವನ್ನುಂಟುಮಾಡುತ್ತಿತ್ತು.

ಇದಾದ ಕೆಲವು ವಾರಗಳ ನಂತರ, ಹಳ್ಳಿಯ ಜನರೊಂದಿಗೆ ಹೊಂದಾಣಿಕೆಯಿಂದ ಯಾವುದೇ ಭಿನ್ನಾಭಿಪ್ರಾಯವಿಲ್ಲದೇ ಆ ಭಗ್ನಾವಶೇಷಗಳನ್ನು ತೆಗೆದು, ಆಟದ ಸೆಟ್ಟುಗಳನ್ನು ಪುನಃ ಅಳವಡಿಸಲಾಯಿತು ಮತ್ತು ಬಸ್ ನಿಲ್ದಾಣವನ್ನು ಕೂಡಾ ಪುನರ್‌ನಿರ್ಮಿಸಲಾಯಿತು. ತಪೋನಗರದ ವ್ಯಕ್ತಿತ್ವವು ಗುರೂಜಿಯವರ ವ್ಯಕ್ತಿತ್ವದಂತೆ– ಆಂತರ್ಯದಿಂದ ಚೇತರಿಸಿಕೊಳ್ಳುವ, ಎಲ್ಲವನ್ನೂ ಒಪ್ಪಿಕೊಳ್ಳುವ ಸಹನಶೀಲ ಮನಸ್ಥಿತಿ, ಘನತೆಯ ಹಾಗೂ ಸಮರಸದ ಪರಸ್ಪರ ವ್ಯವಹಾರ, ಬೇರೆಯವರ ಉಪಯೋಗಕ್ಕೆ ಪ್ರೀತಿಯಿಂದ ಪುನರ್ನಿಮಿಸುವುದು ಮತ್ತು ಸವಾಲುಗಳನ್ನೆದುರಿಸುವಾಗ ಭಿನ್ನಾಭಿಪ್ರಾಯಗಳನ್ನು ಕರಗಿಸಿ ಹಾಕುವ ಮುಗುಳ್ನಗೆ ಬೀರುವುದು.

ತಪೋನಗರವು ಗುರೂಜಿಯವರನ್ನು ಅಭಿವ್ಯಕ್ತಿಸುವುದನ್ನು ಮುಂದುವರಿಸುತ್ತಿದೆ ಮತ್ತು ಅವರ ಧ್ಯಾನಿಗಳ ಮೂಲಕ ಋಷಿಗಳು ತಮ್ಮ ಕೆಲಸವನ್ನು ಮುಂದುವರಿಸುತ್ತಿದ್ದಾರೆ. 'ರಾ' ಮತ್ತು ಶಂಬಲದ ಅಪರೂಪದ ದಿವ್ಯ ಚೈತನ್ಯಗಳನ್ನು, ನಿಯತವಾಗಿ ನಡೆಯುತ್ತಿರುವ ಅವುಗಳ ತರಗತಿಗಳಲ್ಲಿ ಸಾಧಕರಿಗೆ ವರ್ಗಾಯಿಸುವುದು ಮುಂದುವರಿಯುತ್ತಿದೆ. ಬೆಳಕಿನಿಂದ ಕ್ರಾಂತಿಯು ಹೆಚ್ಚು ಹರಡುತ್ತಿದೆ. ಋಷಿಗಳ ನೆಲೆಯಾದ ತಪೋನಗರವು, ಗುರೂಜಿಯವರು ಸಮರ್ಥಿಸಿದ ಎಲ್ಲವನ್ನೂ ಅಭಿವ್ಯಕ್ತಿಸುವುದನ್ನು ಮುಂದುವರಿಸುತ್ತಿದೆ. ಅದು ಆಧ್ಯಾತ್ಮಿಕ ಮೂಲದ ಶಾಶ್ವತ ಗುಣವನ್ನು ದೃಢೀಕರಿಸಿದೆ.

ಹೊಸ ಲೈಟ್ ಚಾನಲ್ಸ್ ಆಫೀಸಿನ ಕಟ್ಟಡವು ಗುರೂಜಿಯವರ ಎರಡನೇ ಮಹಾಸಮಾಧಿ ದಿನದಂದು ಉದ್ಘಾಟನೆಗೊಳ್ಳಲಿದೆ. ಇದು ತಪೋನಗರ ನಿವಾಸಿ ಮತ್ತು ಅನಿವಾಸಿಗಳನ್ನೊಳಗೊಂಡಂತೆ ಎಲ್ಲಾ ತಪೋನಗರಿಗರು ತಮ್ಮ ಪ್ರೀತಿಯ ಆಧ್ಯಾತ್ಮಿಕ ಗುರುವಾದ ಗುರೂಜಿ ಕೃಷ್ಣಾನಂದರಿಗೆ ತೋರಿದ ಸಮರ್ಪಣೆ, ಪ್ರೀತಿ ಹಾಗೂ ಬದ್ಧತೆಯ ಸಂಕೇತವಾಗಿದೆ. ■

## ಲೈಟ್ ಚಾನಲ್ಸ್

### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

# ಗುರೂಜಿ ಹೀಗೆ ನುಡಿದರು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಸೆಪ್ಟೆಂಬರ್ 2004

ಮಹಾನ್ ಕೆಲಸಗಳು ಸದ್ದಿಲ್ಲದೆ ನಡೆಯುತ್ತವೆ. ಉದಾಹರಣೆಗೆ, ಧ್ರುವಗಳು ಸ್ಥಳಾಂತರಗೊಳ್ಳುತ್ತಿವೆ, ಭೂಮಿ ಅತಿ ನಿಧಾನವಾಗಿ ವಾಲುತ್ತಿದೆ. ಮಂಜುಗಡ್ಡೆಗಳು ನಿಧಾನವಾಗಿ ಕರಗುತ್ತಿವೆ. ಋತುಗಳು ಬದಲಾಗುತ್ತಿವೆ, ಪ್ರಳಯ ತೀವ್ರಗೊಳ್ಳುತ್ತಿದೆ, ಸಕಾರಾತ್ಮಕ ಶಕ್ತಿಗಳ ಮತ್ತು ನಕಾರಾತ್ಮಕ ಶಕ್ತಿಗಳ ಧ್ರುವೀಕರಣವಾಗುತ್ತಿದೆ. ಗಮನಿಸಿದರೆ ಇವು ನಿಮಗೆ ತಿಳಿಯುತ್ತದೆ. ಅದ್ಭುತಗಳು ನಡೆಯುತ್ತಿವೆ; ಅವು ಸ್ವಲ್ಪವೂ ಸದ್ದಿಲ್ಲದೆ ನಡೆಯುತ್ತವೆ. ಪವಾಡಗಳು ನಮ್ಮ ವೈಯಕ್ತಿಕ ಜೀವನಗಳಲ್ಲೂ ನಡೆಯುತ್ತಿವೆ. ಆಧ್ಯಾತ್ಮಿಕ ಅರಿವು ನಮ್ಮಲ್ಲುಂಟಾಗುತ್ತಿದೆ. ನಾವು ಅತ್ಯುತ್ತಮ ಧ್ಯಾನಿಗಳಲ್ಲದಿರಬಹುದು, ಋಷಿಗಳು ನಮಗೆ ಹೇಳಿದ್ದೆಲ್ಲವನ್ನೂ ನಾವು ಪಾಲಿಸುತ್ತಿಲ್ಲದಿರಬಹುದು, ಆದರೂ ನಮ್ಮಲ್ಲಿ ಆಧ್ಯಾತ್ಮಿಕ ಅರಿವು ಇದೆ. ಅದು ಹಿಂದೆ ನಮ್ಮಲ್ಲಿರಲಿಲ್ಲ. ಈ ಅರಿವನ್ನು ನಾವು ಇತರರಲ್ಲೂ ಕಾಣಬಹುದು. ಪ್ರತಿಯೊಬ್ಬರೂ ಬದಲಾಗುತ್ತಿಲ್ಲದಿರಬಹುದು, ಬೆಳೆಯುತ್ತಿಲ್ಲದಿರಬಹುದು ಅಥವ ಧ್ಯಾನಮಾಡುತ್ತಿಲ್ಲದಿರಬಹುದು, ಆದರೂ ಈ ಅರಿವು ಅವರಲ್ಲಿದೆ. ಅದು ಬಹು ದೊಡ್ಡ ವಿಷಯ. ಇದು ನಮ್ಮನ್ನು ಮುನ್ನಡೆಸುತ್ತದೆ. ಇದೆಲ್ಲವನ್ನೂ ನಾನು ಹಿನ್ನೆಲೆಯಾಗಿ ಹೇಳಿದ್ದೇನೆ.

ಕೆಲವು ದಿನಗಳ ಹಿಂದೆ ಮಹಾನ್ ಚೈತನ್ಯಗಳನ್ನು ಕೆಳತರಲಾಯಿತು. ಅಮರರವರು ಮತ್ತು ಸಪ್ತಋಷಿಗಳು ಅಲ್ಲಿದ್ದರು. 'ಇವು ಸತ್ಯ ಯುಗದ ಚೈತನ್ಯಗಳು' ಎಂದು ಹೇಳಿ ಭಗವಾನ್ ಶ್ರೀ ಕೃಷ್ಣ ಈ ಚೈತನ್ಯಗಳನ್ನು ಕೊಟ್ಟರು. ಅವುಗಳನ್ನು ಇಲ್ಲಿ ಭೂಮಿಯ ಕೆಳಗೆ ಸ್ಥಾಪಿಸಲಾಯಿತು. ಅದಕ್ಕೆ ಪ್ರಚಾರ ಕೊಡಲಿಲ್ಲವಾದ್ದರಿಂದ ಅದರ ಬಗ್ಗೆ ಯಾರಿಗೂ ತಿಳಿದಿಲ್ಲ. ನಾನು ಹೇಳಿದ ಹಾಗೆ, ಮಹಾನ್ ಕಾರ್ಯಗಳು ಯಾವಾಗಲೂ ಸದ್ದಿಲ್ಲದೆ ನಡೆಯುತ್ತವೆ. ನಿಮ್ಮ ಧ್ಯಾನ ಸುಗಮವಾಗುವುದನ್ನು ಮತ್ತು ಆಳವಾಗುವುದನ್ನು ನೀವು ಕಾಣುತ್ತೀರಿ. ನಮ್ಮ ನಕಾರಾತ್ಮಕತೆಗಳನ್ನು ಸುಲಭವಾಗಿ ನಿವಾರಿಸಿಕೊಳ್ಳುವುದು ನಮಗೆ ಸರಳವಾಗುತ್ತದೆ.

ಪ್ರತಿ ಕೃಷ್ಣಜನ್ಮಾಷ್ಟಮಿಯ ದಿನದಂದು, ಕೆಲವು ಜನರನ್ನು/ಕೇಸುಗಳನ್ನು ಕೃಷ್ಣ ಭಗವಾನರ ಬಳಿಗೆ ತೆಗೆದುಕೊಂಡು ಹೋಗುವುದು ವಾಡಿಕೆ. ನನ್ನ ಗುರು ಶಿಫಾರಸು ಮಾಡಿದ ಪ್ರತಿಯೊಂದು ಕೇಸನ್ನೂ ಕೃಷ್ಣ ಭಗವಾನರು ಆಲಿಸುತ್ತಿದ್ದರು. ಈ ತಂಡದ ನೇತೃತ್ವವನ್ನು ಯಾವಾಗಲೂ ನನ್ನ ಗುರುವೇ ವಹಿಸುತ್ತಾರೆ. ಈ ವರ್ಷ ಕೂಡ ನಾವು ಅನೇಕ ಕೇಸುಗಳನ್ನು ತೆಗೆದುಕೊಂಡು ಹೋದೆವು. ಎಲ್ಲ ಕೇಸುಗಳಲ್ಲೂ ಸಹಾಯ ಮಾಡುವುದಾಗಿ ಅವರು ಆಶ್ವಾಸನೆ ನೀಡಿದರು. ದೇವರು ಆಶ್ವಾಸನೆಗಳನ್ನು ನೀಡಿದಾಗ, ಅವನು ಯಾವಾಗಲೂ ತನ್ನ ಆಶ್ವಾಸನೆಗಳನ್ನು ಈಡೇರಿಸುತ್ತಾನೆ. "ಆಗಲಿ, ನಾನು ನಿನಗೆ ಸಹಾಯ ಮಾಡುತ್ತೇನೆ, ಆದರೆ ನೀನು ಋಷಿಗಳ ಮಾತನ್ನೇಕೆ ಕೇಳಲಿಲ್ಲ? ಋಷಿಗಳನ್ನು ನಾನು ಉಪೇಕ್ಷಿಸಲಾರೆ" ಎಂದು ಸಾಮಾನ್ಯವಾಗಿ ಜನರಿಗೆ ಕೇಳುತ್ತಿದ್ದರು. ಆ ರೀತಿಯಲ್ಲಿ ದೇವರಿಗೆ ಶಕ್ತಿಯಿಲ್ಲ! ಋಷಿಗಳೇ ಹೆಚ್ಚು ಶಕ್ತಿವಂತರು! "ಋಷಿಗಳ ಮಾತನ್ನು ನೀವು ಕೇಳಬೇಕು" ಎಂಬ ಅವರ ಹೇಳಿಕೆಯನ್ನು ನಾನು ಅನೇಕ ಕೇಸುಗಳಲ್ಲಿ ಕೇಳಿದ್ದೇನೆ. "ನೀನು ಬದಲಾಗುವುದಾಗಿ ಪ್ರಮಾಣ ಮಾಡಿದರೆ, ನಾನು ನಿನ್ನ ಸಮಸ್ಯೆಯನ್ನು ಮುಂದೂಡಿ ನಿನಗೆ ಉಪಶಮನ ನೀಡುತ್ತೇನೆ. ನೀನು ಬದಲಾದಾಗ ನಿನ್ನ ಸಮಸ್ಯೆಯನ್ನು ಪರಿಹರಿಸುತ್ತೇನೆ" ಎಂದು ಕೆಲವು ಕೇಸುಗಳಲ್ಲಿ ಹೇಳಿದ್ದರು.

ಪರಿಶುದ್ಧ ಪ್ರಜ್ಞಾಸಾಗರವಾದ ನಿರಾಕಾರ ಪರಬ್ರಹ್ಮನನ್ನು ನಾವು ಇಲ್ಲಿ ಪೂಜಿಸುತ್ತೇವೆ. ಅವನನ್ನು ನಾವು ವಿಶೇಷ ರೀತಿಯಲ್ಲಿ ಪೂಜಿಸುತ್ತೇವೆ. ಹೂವುಗಳು, ಹಣ್ಣುಗಳು, ಮಂತ್ರಗಳು ಮತ್ತು ಧಾರ್ಮಿಕವಿಧಿಗಳಿಂದ ನಾವು ಪೂಜಿಸುವುದಿಲ್ಲ. ನಾವು ಅದನ್ನು ಧ್ಯಾನದಿಂದ ಮಾಡುತ್ತೇವೆ. ಧ್ಯಾನವು ಪೂಜೆಯ ಅತ್ಯುನ್ನತ ವಿಧಾನ. ಶರಣಾಗುವ ಮೂಲಕ ನಾವು ಪೂಜಿಸುತ್ತೇವೆ; ಶರಣಾಗತಿ ಕೂಡ ಪೂಜಿಸುವ ಒಂದು ವಿಧಾನ. ನಮ್ಮ ಪ್ರೀತಿ ಮತ್ತು ಗೌರವವನ್ನು ಅಭಿವ್ಯಕ್ತಿಗೊಳಿಸುವುದೇ ಪೂಜೆ. ನಮ್ಮ ಅಹಂ ಅನ್ನು ಬದಿಗಿಟ್ಟು ಪೂಜಿಸುತ್ತೇವೆ. ಸದಾಕಾಲ ವಲ್ಲದಿದ್ದರೂ, ಸಾಧ್ಯವಾದಾಗಲೆಲ್ಲಾ ಅವನ ಪ್ರಜ್ಞೆಯಲ್ಲಿಯೇ ಜೀವಿಸಿದ್ದು ಅವನಿಗೆ ಪೂಜೆ ಸಲ್ಲಿಸುತ್ತೇವೆ!

ದೇವರ ಅಂಶಗಳಾದ ಪ್ರೀತಿ, ಶಾಂತಿ ಇತ್ಯಾದಿಗಳನ್ನು ಅಭಿವ್ಯಕ್ತಿಸುವುದರ ಮೂಲಕ ಅವನನ್ನು ಪೂಜಿಸುತ್ತೇವೆ. ನಮ್ಮ ಪೂಜೆ ದೇವಸ್ಥಾನಗಳಿಗೆ ಸೀಮಿತವಾಗಿಲ್ಲ. ಈ ಪೂಜೆ ಧ್ಯಾನದ ಅವಧಿಗಳಿಗೂ ಸೀಮಿತವಾಗಿಲ್ಲ. ದೇವರು ಎಲ್ಲಾ ಕಡೆ ಇದ್ದಾನೆ; ಆದ್ದರಿಂದ ನಾವು ಎಲ್ಲಿದ್ದೇವೆಯೋ ಅಲ್ಲೇ ಪೂಜಿಸುತ್ತೇವೆ. 'ನಿಮ್ಮ ಆಶ್ರಮ ಎಲ್ಲಿದೆ?' ಎಂದು ಒಬ್ಬರು ನನ್ನ ಗುರುವನ್ನು ಕೇಳಿದಾಗ, 'ಇಡೀ ಪ್ರಪಂಚವೇ ನಮ್ಮ ಆಶ್ರಮ, ಈ ಭೂಮಿ ನನ್ನ ಆಶ್ರಮ' ಎಂದು ಅವರು ಹೇಳಿದರು.

ನಮ್ಮ ಪೂಜೆ ಅಂತರ್ಯದಲ್ಲಿ ಮೌನವಾಗಿ ನಡೆಯುತ್ತದೆ ಮತ್ತು ನಮ್ಮ ಪೂಜೆ ಮತ್ತೊಬ್ಬರ ಪೂಜೆಗೆ ಅಡ್ಡಿಯಾಗುವುದಿಲ್ಲ. ದೇವರು ನಮ್ಮೊಳಗೆ ಹಾಗೂ ಎಲ್ಲೆಲ್ಲಿಯೂ ಇದ್ದಾನೆ ಎನ್ನುವ ಅರಿವು ನಮ್ಮಲ್ಲಿ ಸದಾ ಕಾಲ ಇರಲೇ ಬೇಕು. ದೇವಸ್ಥಾನವೊಂದರಲ್ಲೆಲ್ಲೋ ಇರುವ ದೇವರೆಂದು ನಾವು ಇವನನ್ನು ತಿಳಿಯಬಾರದು. ಸ್ವಲ್ಪ ಚಿಂತನೆ ಮಾಡಿದರೆ, ಇವನೊಬ್ಬನೇ ನಮ್ಮ ಶಾಶ್ವತ ಸಂಗಾತಿ ಎನ್ನುವುದು ನಮಗೆ ಅರ್ಥವಾಗುತ್ತದೆ.

ಕರ್ಮ ಯೋಗ ಎಂದರೇನು? ಅನೇಕರಿಗೆ ಅನುಕೂಲವಾಗುವ ನಿಸ್ವಾರ್ಥ ಕಾರ್ಯವೇ ಕರ್ಮ ಯೋಗ. ಇದರ ಹಿಂದೆ ಮಹಾನ್ ಪ್ರೀತಿ ಇರುತ್ತದೆ. ಈ ಪ್ರೀತಿ ಎಲ್ಲರಲ್ಲೂ ಇರುವ ದೇವರ ಕಡೆಗಿರುತ್ತದೆ. ನಾವು ಹೆಚ್ಚಾಗಿ ಮತ್ತು ಹೆಚ್ಚು ಜನರಿಗೆ ಸೇವೆ ಸಲ್ಲಿಸಿದರೆ, ದೇವರ ಸೇವೆಯನ್ನೇ ಮಾಡುತ್ತಿರುತ್ತೇವೆ. ಈ ಪ್ರೀತಿ ನನಗೆ, ನನ್ನ ಸಂಸಾರಕ್ಕೆ ಮತ್ತು ನನ್ನ ಸುತ್ತಮುತ್ತಲಿಗಷ್ಟೇ ಸೀಮಿತವಾಗಿಲ್ಲ. ಈ ರೀತಿಯಲ್ಲಿ ನಾವು ಕರ್ಮ ಯೋಗ ಮಾಡಿದಾಗ, ಕೆಲಸದ ಗುಣಮಟ್ಟವೇ ಬದಲಾಗುತ್ತದೆ; ಅದು ಭಕ್ತಿ ಯೋಗವಾಗುತ್ತದೆ. ಪ್ರೀತಿಯಿಲ್ಲದಿದ್ದರೆ ಯೋಗವಿಲ್ಲ.

ನಾವು ಬದಲಾಗುತ್ತಿದ್ದೇವೆನ್ನುವುದು ನಮಗೆ ತಿಳಿದಿರಬೇಕು. ನಮ್ಮನ್ನು ಗಮನಿಸಿಕೊಂಡರೆ, ಎದ್ದು ಕಾಣುವಂತಹ ಬದಲಾವಣೆಗಳಲ್ಲದಿದ್ದರೂ ನಮಗೇ ತಿಳಿಯುವಂತಹ ಬದಲಾವಣೆಗಳಾಗಿರುತ್ತವೆ. ಅಂಥ ಬದಲಾವಣೆಗಳಿಗೆ ಕಾರಣವೇನು? ಋಷಿಗಳು ಬಿಡುಗಡೆಮಾಡಿರುವ ಚೈತನ್ಯವು ಜನರು ಮುಂದಿನ ಯುಗಕ್ಕೆ ಹೋಗಲು ಮತ್ತು ಪರಿವರ್ತನೆಗೊಳ್ಳಲು ಸಹಾಯ ಮಾಡುತ್ತಿದೆ. ಕೆಲವೊಮ್ಮೆ ನಮಗೂ ಗೊತ್ತಿಲ್ಲದ ಈ ಬದಲಾವಣೆಗಳು, ಭೌತಿಕ ಮಟ್ಟದಲ್ಲಿ ಪೂರ್ಣವಾಗಿ ಅಭಿವ್ಯಕ್ತಗೊಳ್ಳಲು ಸಮಯ ತೆಗೆದುಕೊಳ್ಳಬಹುದು. ಅದು ಹತ್ತು-ಇಪ್ಪತ್ತು ವರ್ಷಗಳಾಗಬಹುದು ಅಥವ 400 ವರ್ಷಗಳೂ ಆಗಬಹುದು. ಪರವಾಗಿಲ್ಲ. ಈ ಬದಲಾವಣೆ ಆಗುತ್ತದೆ. ಸಾಮಾನ್ಯ ಮಾನವರು ದೈವೀ ವ್ಯಕ್ತಿಗಳಾಗಿ ಸಂಪೂರ್ಣ ಪರಿವರ್ತನೆ ಆಗುತ್ತಾರೆ.

ಇದರ ಬಗ್ಗೆ ಮಾತನಾಡಿದಾಗಲೆಲ್ಲ ಒಂದು ಪ್ರಶ್ನೆ ಏಳುತ್ತದೆ. ಯಾವುದೇ ಪ್ರಯತ್ನವಿಲ್ಲದೆ ನಾವು ಬದಲಾಗುವುದಾದರೆ ಅಥವ ಆಧ್ಯಾತ್ಮಿಕವಾಗಿ ಪ್ರಗತಿಹೊಂದುವುದಾದರೆ, ಈಗ ಧ್ಯಾನದ ಅವಶ್ಯಕತೆ ಏನಿದೆ? ನಿಜ ಹೇಳಬೇಕೆಂದರೆ ಇವುಗಳು ಬೇಕಾಗಿಲ್ಲ; ನಾವು ಇರುವ ಹಾಗೆಯೇ ಇರಬಹುದು, ಆದರೆ ಮನುಷ್ಯ ಕೇವಲ ಆ ರೀತಿ ಇರುವುದಕ್ಕಾಗಿ ಹುಟ್ಟಿಲ್ಲ. ತನ್ನ ಎಲ್ಲ ಅಪರಿಪೂರ್ಣತೆಗಳ ನಡುವೆಯೂ ಈ ಅದ್ಭುತ ಮನುಷ್ಯನಲ್ಲಿ ವಿಶೇಷವಾದುದೇನೋ ಇದೆ. ಬಹುತೇಕ ಜನರು ಅದೇ ರೀತಿ ಉಳಿದರೂ, ಕೆಲವರು ಬೇಗ ಬದಲಾಗಲು ಯಾವಾಗಲೂ ಸಿದ್ಧರಾಗಿರುತ್ತಾರೆ. 400, 40 ಅಥವ 20 ವರ್ಷಗಳು ಏಕೆ ಕಾಯಬೇಕು? ಎಂದು ಅವರು ಕೇಳುತ್ತಾರೆ. ಈಗಲೇ ಬದಲಾಗೋಣ, ಸತ್ಯ ಯುಗದಲ್ಲಿ ಈಗಿನಿಂದಲೇ ಬದುಕಲು ಪ್ರಾರಂಭಿಸೋಣ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

27–7–2014

ಸಮಸ್ಯೆಗಳು ನಾವು ಪರಿವರ್ತನೆಗೊಳ್ಳಲು ಸಹಾಯ ಮಾಡುತ್ತವೆ. ಸಮಸ್ಯೆಗಳು ಅತಿಯಾದಾಗ ಅದು ಹೇಗೋ ನಾವು ವಿನೀತರಾಗುತ್ತೇವೆ, ನಮ್ಮಲ್ಲಿ ಅಹಂಕಾರವಿದ್ದರೆ ಅದರ ನಿವಾರಣೆಯಾಗುತ್ತದೆ. ಸಮಸ್ಯೆಗಳು ನಮ್ಮನ್ನು ಹೆಚ್ಚು ವಿವೇಕಿಯನ್ನಾಗಿಸುತ್ತವೆ ಮತ್ತು ನಮ್ಮಲ್ಲಿ ಪರಿವರ್ತನೆಯುಂಟಾಗುತ್ತದೆ. ಪರಿವರ್ತನೆ ಎಷ್ಟು ಬೇಗನೆ ಆಗುತ್ತದೆ ಎನ್ನುವುದು ನಮ್ಮನ್ನು ಅವಲಂಬಿಸಿದೆ. ಬಹುತೇಕ ಸಮಯಗಳಲ್ಲಿ ಸಮಸ್ಯೆಗಳು ಸಂದೇಶವನ್ನು ಕೊಡುತ್ತವೆ; ಏನನ್ನಾದರೂ ತಿಳಿಸುವುದಕ್ಕಾಗಿ ಅವು ಬರುತ್ತವೆ. ಹಾಗೂ ಅನೇಕ ವೇಳೆ ಸಮಸ್ಯೆಗಳು ನಮ್ಮದೇ ಸೃಷ್ಟಿಯಾಗಿರುತ್ತವೆ. ಹಾಗಿದ್ದಾಗ, ಸಮಸ್ಯೆಗಳಿಗೆ ನಾವೇ ಕಾರಣ ಎಂದು ಎಷ್ಟು ಬೇಗ ಅರಿತುಕೊಳ್ಳುತ್ತೇವೆಯೋ ಅದರ ಮೇಲೆ ಪರಿವರ್ತನೆಯು ಅವಲಂಬಿತವಾಗಿರುತ್ತದೆ. ನಾವು ಇದನ್ನು ಅರಿತುಕೊಂಡಾಗ ಪರಿವರ್ತನೆಯು ಪ್ರಾರಂಭವಾಗುತ್ತದೆ. ಪರಿವರ್ತನೆಯ ಪ್ರಕ್ರಿಯೆಯ ಜೊತೆಯಲ್ಲಿಯೇ ಸಮಸ್ಯೆಗಳೂ ಕಣ್ಮರೆಯಾಗಲಾರಂಭಿಸುತ್ತವೆ. ಆದರೆ ನಾವು ಸಮಸ್ಯೆಗಳನ್ನು ಎದುರಿಸುತ್ತಿರುವಾಗ ಈ ಸಂಗತಿಯನ್ನು ಅರಿಯುವುದು ಸುಲಭವಲ್ಲ. ಅದಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ. ಸಾಮಾನ್ಯವಾಗಿ ನಾವು ದೂರುವುದನ್ನೂ, ಗೊಣಗುವುದನ್ನೂ ಮಾಡುತ್ತಿರುತ್ತೇವೆ. ನಮ್ಮನ್ನು ಹೊರತುಪಡಿಸಿ ಕೊಂಡು, ನಮ್ಮ ಸುತ್ತಮುತ್ತಲಿನವರೆಲ್ಲರನ್ನೂ ಹಾಗೂ ದೇವರನ್ನೂ ಕೂಡ ದೂರುತ್ತಿರುತ್ತೇವೆ!

ಆದರೆ ಸಮಸ್ಯೆಗಳು ನಮಗೆ ಸಹಾಯವನ್ನೇ ಮಾಡುತ್ತವೆ ಎನ್ನುವುದು ನನ್ನ ಅನಿಸಿಕೆ. ಕೆಲವೊಮ್ಮೆ ಸಮಸ್ಯೆಗಳ ಪರಿಹಾರಕ್ಕಾಗಿ ನಾವು ತಪ್ಪು ದಾರಿಗಳನ್ನು ಹಿಡಿಯುತ್ತೇವೆ– ಉದಾಹರಣೆಗೆ, ತಾಂತ್ರಿಕರ ಬಳಿಗೆ ಹೋಗುತ್ತೇವೆ. ಅವರನ್ನು ಅನುಸರಿಸಿದರೆ ನಮ್ಮ ಸಮಸ್ಯೆಗಳು ದ್ವಿಗುಣಗೊಳ್ಳುತ್ತವಷ್ಟೇ. ಸಮಸ್ಯೆ ನಮ್ಮಲ್ಲಿಯೇ ಇದೆ ಎಂದು ಅರಿತಾಗ ನಮ್ಮನ್ನು ಬದಲಾಯಿಸಿಕೊಳ್ಳುವ ಕಡೆಗೆ ನಮ್ಮ ಗಮನವನ್ನು ಹರಿಸುತ್ತೇವೆ. ಆಗ ಸಮಸ್ಯೆಗಳಿಂದ ಬೇಗನೇ ಮುಕ್ತರಾಗುತ್ತೇವೆ ಹಾಗೂ ಬದಲಾದ ವ್ಯಕ್ತಿಗಳಾಗಿ ಹೊರಹೊಮ್ಮುತ್ತೇವೆ. ಈ ಪರಿವರ್ತನೆಯ ಪ್ರಕ್ರಿಯೆ ನಿಜವಾಗಿಯೂ ಸ್ವಾರಸ್ಯಕರವಾಗಿರುತ್ತದೆ. ನಮ್ಮ ಪರಿವರ್ತನೆಯಲ್ಲಿ ನೆರವಾಗಲು ದೇವರಿಗೆ ಅನೇಕ ಮಾರ್ಗಗಳಿವೆ. ದೇವರ ಮಾರ್ಗ ಅತ್ಯುತ್ತಮ ಮಾರ್ಗ. ನಮಗೆ ಅತ್ಯುತ್ತಮವಾದುದು ಏನು ಎನ್ನುವುದು ಅವನಿಗೆ ಗೊತ್ತು.

24–08–2014

ನಮ್ಮ "ಬೆಳಕಿಗೆ ಬಾಗಿಲುಗಳು" ಪುಸ್ತಕವು ಜಪಾನಿಸ್ ಭಾಷೆಗೂ ತರ್ಜುಮೆಗೊಂಡಿದೆ. ಅದನ್ನೋದಿದ ಜಪಾನ್ ದೇಶದವರೊಬ್ಬರು ವೆಬ್‌ಸೈಟ್ ಒಂದರಲ್ಲಿ ತಮ್ಮ ಅಭಿಪ್ರಾಯ ಬರೆದರು. ಗುರೂಜಿಯವರ ತೀವ್ರ ಮಟ್ಟದ ಪ್ರಾಮಾಣಿಕತೆ ಮತ್ತು ಪರಿಶುದ್ಧತೆಯನ್ನು ಕಂಡು ಭಾವುಕ ರಾದುದಾಗಿ ಅವರು ಹೇಳುತ್ತಾರೆ. ಈ ವ್ಯಕ್ತಿಯು ಪುಸ್ತಕದ ಮೂಲಕ ಗುರೂಜಿಯವರನ್ನು ಭೇಟಿಮಾಡಿದರೆಂದು ಹೇಳಬಹುದು. ಪುಸ್ತಕವು ಗುರೂಜಿಯವರ ಚೈತನ್ಯಗಳನ್ನು ಹೊಂದಿರುತ್ತದೆ. ಹಾಗಾಗಿ, ಗುರೂಜಿಯವರ ವ್ಯಕ್ತಿತ್ವದ ಅನುಭವ ಆ ವ್ಯಕ್ತಿಗಾಯಿತು. ನಮ್ಮ ವಿದ್ಯಾರ್ಥಿಯೇ ಆದ ಜಪಾನಿನ ಅನುವಾದಕರನ್ನೂ ನಾವು ಮೆಚ್ಚಿಕೊಳ್ಳಬೇಕು. ಈಕೆ ತುಂಬಾ ಪ್ರಾಮಾಣಿಕವಾಗಿ ಕೆಲಸವನ್ನು ಮಾಡಿದ್ದಾರೆ. ಇಂಥ ಜನರಿಂದಾಗಿ ನಮ್ಮ ಕೆಲಸ ವಿಸ್ತರಿಸುತ್ತಿದೆ, ಗುರೂಜಿಯವರ ಬೆಳಕು ಜಪಾನಿನಂತಹ ದೂರದ ಸ್ಥಳಕ್ಕೂ ಹರಡುತ್ತಿದೆ.

ಗುರೂಜಿಯವರ ಪ್ರತಿಯೊಂದು ಚಲನೆ ಮತ್ತು ಅವರ ಪೂರ್ಣ ವ್ಯಕ್ತಿತ್ವ ಹೇಗಿತ್ತೆಂದರೆ ಅವರೊಂದು 'ಬೆಳಕು' ಎಂದು ಕೂಡಲೇ ಗುರುತಿಸಬಹುದಿತ್ತು, ಎಂದು ಮುಂಬಯಿನ ವ್ಯಕ್ತಿಯೊಬ್ಬರು ನನಗೆ ಹೇಳಿದರು. ಆಕೆ ಹೇಳಿದ್ದು ಎಷ್ಟೊಂದು ಸರಿ. ನಾವು ಮಾಡುವ ಪ್ರತಿಯೊಂದು ಕೆಲಸ, ನಾವು ನಡೆದುಕೊಳ್ಳುವ ರೀತಿ, ಆಕೆ ಹೇಳುವ ಹಾಗೆ ನಮ್ಮ ಚಲನವಲನಗಳ ರೀತಿ, ನಾವು ಬಟ್ಟೆ ಧರಿಸುವ ರೀತಿ... ಪ್ರತಿಯೊಂದೂ ನಮ್ಮ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ. ಇದು ತಂತಾನೆ ಆಗುತ್ತದೆ. ಧ್ಯಾನ ನಮ್ಮ ವ್ಯಕ್ತಿತ್ವವನ್ನು ಪರಿಷ್ಕರಿಸಿಕೊಳ್ಳಲು ಸಹಾಯಮಾಡುತ್ತದೆನ್ನುವುದು ನಮಗೆ ತಿಳಿದಿದೆ. ಧ್ಯಾನ ನಮ್ಮನ್ನು ದೈವತ್ವದೆಡೆಗೆ, ಬೆಳಕಿನೆಡೆಗೆ ಕೊಂಡೊಯ್ಯುತ್ತದೆ. ಅದು ನಾವು ಬೆಳಕಾಗಲು ಸಹಾಯ ಮಾಡುತ್ತದೆ. ಹೀಗಾದಾಗ ಬೆಳಕು ನಮ್ಮೊಳಗಿನಿಂದ ಪ್ರಕಾಶಿಸುತ್ತದೆ.

ಗುರೂಜಿಯವರು ಪ್ರಾಸಂಗಿಕವಾಗಿ ಹೇಳಿದ ಕೆಲವು ವಿಷಯಗಳು ಸತ್ಯವಾದವು. ಗುರೂಜಿ ಮತ್ತು ಅಮರರವರಂತಹ ಮಾಸ್ಟರ್‌ಗಳಿಗೆ ಮುಂದಾಗುವುದು ತಿಳಿದಿತ್ತು. ಅದು ಒಂದು ಭಾಗ. ಮತ್ತೊಂದು ಭಾಗವೆಂದರೆ, ಅವರುಗಳು ಪೂರ್ಣವಾಗಿ ದೇವರೊಂದಿಗೆ ಶ್ರುತಿ ಗೊಂಡಿರುತ್ತಿದ್ದುದರಿಂದ ಅವರು ಹೇಳುತ್ತಿದ್ದುದೆಲ್ಲವೂ ಸತ್ಯವಾಗುತ್ತಿತ್ತು. ಸ್ವಾಭಾವಿಕವಾಗಿಯೇ ಅವರುಗಳು ಇಡೀ ಪ್ರಪಂಚದ ಅಭ್ಯುದಯದ ಬಗ್ಗೆ ಯೋಚಿಸುತ್ತಿದ್ದರು. ಮಾಸ್ಟರ್‌ಗಳಲ್ಲಿ ಅಪಾರವಾದ ಪ್ರೀತಿಯಿರುವುದರಿಂದ, ಅವರು ಬೇರೆಯವರಿಗಾಗಿ ಭೂಮಿಗೆ ಬಂದು ಜೀವಿಸುತ್ತಾರೆ.

ಅಮರರವರು ಮತ್ತು ಗುರೂಜಿಯವರು ಹೊಸ ಯುಗದ ಕನಸು ಕಂಡರು, ಅದರಂತೆಯೇ ಹೊಸ ಯುಗದ ಕಡೆಗೆ ನಾವು ಸಾಗುತ್ತಿದ್ದೇವೆ. ಅವರ ಕನಸುಗಳು, ಅವರ ಪರಿಶುದ್ಧ ಆಶಯಗಳು ತರಂಗಗಳಾಗಿ ಹೊರಹೊಮ್ಮಿ, ಅವರ ಕನಸುಗಳಲ್ಲಿ ಭಾಗವಹಿಸಲು ಇತರರಿಗೆ ಉತ್ತೇಜನ ನೀಡುತ್ತವೆ. ಹೆಚ್ಚು ಹೆಚ್ಚು ಜನರು ಸೇರಿದಂತೆ, ಇಂಥ ಶುದ್ಧ ಆಶಯಗಳು ಬಲವನ್ನು ಪಡೆಯುತ್ತವೆ. ನಂತರ ಹೊಸ ಯುಗ ನಿಧಾನವಾಗಿ ಅಭಿವ್ಯಕ್ತಿಗೊಳ್ಳುತ್ತದೆ. ನಾಳಿನ ದಿನಗಳಲ್ಲಿ ಉತ್ತಮ ಪ್ರಪಂಚವನ್ನು ನೋಡುತ್ತೇವೆ, ಅದರಲ್ಲಿ ಅನುಮಾನವಿಲ್ಲ.

14–09–2014

ಧ್ಯಾನಿಯಲ್ಲದ ಮಹಾರಾಷ್ಟ್ರದ ವ್ಯಕ್ತಿಯೊಬ್ಬರು, ಬೆಂಗಳೂರಿನಿಂದ ತಪೋನಗರಕ್ಕೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದರು. ಅವರು ಬಸ್ಸಿನಲ್ಲಿ ತಪೋನಗರದ ಬಗ್ಗೆ ವಿಚಾರಿಸುತ್ತಿದ್ದರು. 'ತಪೋನಗರ; ಬೆಳಕು; ನನಗೆ ಆ ಸ್ಥಳ ಗೊತ್ತಿದೆ' ಎಂದು ಆ ವ್ಯಕ್ತಿಗೆ 11–12 ವರ್ಷದ ಬಾಲಕನೊಬ್ಬ ಹೇಳಿದ. ಅವನು ಬಹಳ ಉತ್ಸಾಹ ಮತ್ತು ಗೌರವಾದರದಿಂದ ಮಾತನಾಡಿದ. ಜನರು ತಪೋನಗರಕ್ಕೂ ಮತ್ತು ಬೆಳಕಿಗೂ ಸಂಬಂಧ ಕಲ್ಪಿಸುತ್ತಾರೆ. ಶಾಲೆಯ ಮಕ್ಕಳು ನಮ್ಮನ್ನು ಬೆಳಕಿನ ಜನರೆಂದು ಗುರುತಿಸುತ್ತಾರೆ. ಮಹತ್ತರವಾದ ಕೆಲಸ ಮಾಡುತ್ತಿರುವ ನಮ್ಮ ಲೈಟ್ ಚಾನಲ್ ಕಾರ್ಯಕರ್ತರಿಗೆ ಇದೊಂದು ಪ್ರಮಾಣಪತ್ರದಂತೆ ಎಂದು ನಾನು ಭಾವಿಸುತ್ತೇನೆ. ನಿಸ್ಸಂದೇಹವಾಗಿ ಅವರು ಪ್ರಮಾಣಪತ್ರಗಳಿಗಾಗಿ ಕೆಲಸಮಾಡುತ್ತಿಲ್ಲ. ಅಮರರವರು ಮತ್ತು ಗುರೂಜಿಯವರು ಈ ಭೂಮಿಯ ಮೇಲೆ ಬೆಳಕಿನ ಯುಗದ ಕನಸು ಕಂಡರು. ಬೆಳಕಿನ ಯುಗದ ಈ ಕನಸಿನಲ್ಲಿ ನಾವೆಲ್ಲರೂ ಅವರ ಜೊತೆ ಸೇರುತ್ತೇವೆ. ಈ ಪ್ರಪಂಚದ ಎಲ್ಲ ಜನರೂ ಬೆಳಕಿನ ಯುಗವನ್ನು ಈ ಕ್ಷಣದಲ್ಲಿಯೇ ಬಯಸಿದರೆ, ಅದು ಈಗಲೇ ಪ್ರಾರಂಭವಾಗುತ್ತದೆನ್ನುವುದು ನಮಗೆ ಗೊತ್ತಿದೆ. ಆದರೆ ಅದು ಈ ರೀತಿ ಆಗುವುದಿಲ್ಲ. ನಾವು ಕಾಯಬೇಕಾಗುತ್ತದೆ. ಅಲ್ಲಿಯವರೆಗೆ ನಾವು ಲೈಟ್ ಚಾನಲಿಂಗ್ ಮಾಡುತ್ತಾ ಹೋಗುತ್ತೇವೆ, ಶಾಲಾ ಮಕ್ಕಳಿಗೆ ಲೈಟ್ ಚಾನಲಿಂಗ್ ಕಲಿಸುತ್ತಾ ಹೋಗುತ್ತೇವೆ. ಈ ಬಾಲಕನ ರೀತಿ ಅವರು ತುಂಬಾ ಪ್ರಾಮಾಣಿಕತೆಯಿಂದ ಲೈಟ್ ಚಾನಲಿಂಗ್ ಮಾಡುತ್ತಾರೆ.

ಧ್ಯಾನವು ನಮ್ಮನ್ನು ದೇವರಿಗೆ ಸಂಪರ್ಕಿಸುತ್ತದೆ. ನಾವು ಧ್ಯಾನಕ್ಕೆ ಸೇರಿದಾಗ, ದೇವರ ಕಡೆಗೆ ಒಂದು ಹೆಜ್ಜೆ ಇಡುತ್ತೇವೆ. ಸಕಾರಾತ್ಮಕತೆಯ ಕಡೆಗೆ ಹಾಗೂ ಆಧ್ಯಾತ್ಮಿಕ ಜೀವನದ ಕಡೆಗೆ ಒಂದು ಹೆಜ್ಜೆಯಿಡುತ್ತೇವೆ. ಸಂಪೂರ್ಣವಾಗಿ ಆಧ್ಯಾತ್ಮಿಕರಾಗಲು ಸಮಯ ಬೇಕಾಗುತ್ತದೆ, ಆದರೆ ಆ ದಿಕ್ಕಿನಲ್ಲಿ ನಾವು ಹೆಜ್ಜೆ ಇಡುತ್ತೇವೆ. ಅದು ಮುಖ್ಯ. ನಾವು ಹಾಗೆ ಮಾಡಿದಾಗ, ದೇವರು ನಮ್ಮ ಕಡೆಗೆ ಸಾವಿರಾರು ಹೆಜ್ಜೆಯಿಡುತ್ತಾನೆ; ಋಷಿಗಳು ಮಿತಿಯನ್ನು ಮೀರಿ ನಮಗೆ ಸಹಾಯಮಾಡುತ್ತಾರೆ. ನಮ್ಮ ಸಮಸ್ಯೆಗಳು ಪರಿಹಾರವಾಗುತ್ತವೆ.

ಕೆಲವೊಮ್ಮೆ ಸಮಸ್ಯೆಗಳು ತಕ್ಷಣದಲ್ಲಿ ಪರಿಹಾರವಾಗುವುದಿಲ್ಲ. ಹೀಗೇಕೆ ಆಗುತ್ತದೆ ಎನ್ನುವುದು ನಮಗೆ ಅರ್ಥವಾಗುವುದಿಲ್ಲ. ಅದು ಪರೀಕ್ಷೆಯಾಗಿರಬಹುದು. ನಮ್ಮ ತಾಳ್ಮೆಯನ್ನು ಪರೀಕ್ಷಿಸಬೇಕಾಗಿದ್ದರೆ ಪರಿಹಾರವನ್ನು ಕೂಡಲೇ ಕೊಡಲು ಸಾಧ್ಯವಿಲ್ಲ. ಅಂತಿಮವಾಗಿ ಎಲ್ಲ ಸಮಸ್ಯೆಗಳೂ ಪರಿಹಾರವಾಗುತ್ತವೆ ಎನ್ನುವುದು ನನ್ನ ಸ್ವಂತ ಅನುಭವ. ಒಂದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಕ್ಕಾಗಿ ನಾವು ಧ್ಯಾನಕ್ಕೆ ಸೇರಿ ಅದು ಪರಿಹಾರವಾದಾಗ, ಧ್ಯಾನವನ್ನು ಅಲ್ಲಿಗೇ ಬಿಡಬಾರದು. ನಾವು ಧ್ಯಾನವನ್ನು ಮುಂದುವರಿಸಬೇಕು. ಧ್ಯಾನವು ನಮ್ಮನ್ನು ಅತ್ಯುನ್ನತ ಮಟ್ಟಕ್ಕೆ ಕರೆದೊಯ್ಯುತ್ತದೆ. ಯಾವುದೇ ಸಹಾಯಕ್ಕಾಗಿ ಯಾರಾದರೂ ನಮ್ಮನ್ನು ಸಂಪರ್ಕಿಸಿದರೆ, ಧ್ಯಾನ ಮಾಡಲು ಅವರಿಗೆ ವಿನಯದಿಂದ ಸಲಹೆ ನೀಡಬೇಕು ಆದರೆ ಒತ್ತಾಯ ಮಾಡಬಾರದು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆ – ಸಂದೇಹಗಳಿಗೆ ಜಯಂತ್ ದೇಶಪಾಂಡೆಯವರು ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿ

**ಜಯಂತ್ ದೇಶ್‌ಪಾಂಡೆ; ಅನು: ಸುಧಾಕರ್**

ಈ ಎರಡು ವರ್ಷಗಳು ಎಷ್ಟು ಬೇಗ ಕಳೆದವು! ತಪೋನಗರದ ಪ್ರಶಾಂತ ವಾತಾವರಣದಲ್ಲಿ ಯಾವಾಗಲೂ ನಾವು ಎದುರುನೋಡುತ್ತಿದ್ದ ಐಗುರೂಜಿ ಸೆಷನ್‌ವೊಂದರಲ್ಲಿ ಅಜ್ಞಾತ ಆಧ್ಯಾತ್ಮಿಕ ವಾಸ್ತವಗಳ ಬಗ್ಗೆ ಅವರೊಂದಿಗೆ ನೆನ್ನೆಯಷ್ಟೇ ಮಾತನಾಡುತ್ತಿದ್ದವೇನೋ ಅನ್ನುವಂತಿದೆ. ತಾವೇ ನೇರವಾಗಿ ಗ್ರಹಿಸಿದ ಅಥವ ಉನ್ನತ ಸೂಕ್ಷ್ಮ ಲೋಕಗಳಲ್ಲಿರುವ ಋಷಿಗಳಿಂದ ಕಲಿತ ಉನ್ನತ ಆಧ್ಯಾತ್ಮಿಕ ಸತ್ಯಗಳನ್ನು ನಮ್ಮಂಥ ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಸರಳವಾಗಿ ವಿವರಿಸುವುದು ಅವರ ವಿಶೇಷತೆಯಾಗಿತ್ತು. ಧ್ಯಾನವನ್ನು ಕಲಿಸಲು ಪ್ರಾರಂಭಿಸಿದ 25 ವರ್ಷಗಳಿಂದಲೂ ಎಷ್ಟು ಉತ್ಸಾಹದಿಂದ ಕಲಿಸುತ್ತಿದ್ದರೋ ಅಷ್ಟೇ ಉತ್ಸಾಹದಿಂದ ಆಸ್ಪತ್ರೆಯಲ್ಲಿ ಮಲಗಿದ್ದಾಗಲೂ ಸತ್ಯಗಳನ್ನು ವಿವರಿಸುತ್ತಿದ್ದರು. ಅವರ ಉತ್ಸಾಹವನ್ನು ನೋಡಿದಾಗ, ಪವಾಡಸದೃಶವಾಗಿ ಅವರ ಕ್ಯಾನ್ಸರ್ ಗುಣಹೊಂದಿ ಅದೇ ಭೌತಿಕ ದೇಹದಲ್ಲಿ ಜೀವಿಸುತ್ತಾ ನಮಗೆ ಮಾರ್ಗದರ್ಶಿಸುವುದನ್ನು ಮುಂದುವರಿಸುತ್ತಾರೇನೋ ಎನ್ನುವ ಭರವಸೆ ನಮ್ಮಲ್ಲಿ ಮೂಡುತ್ತಿತ್ತು. ಘೋರ ವಾಸ್ತವವೊಂದು ತೆರೆದುಕೊಳ್ಳಲು ಕಾಯುತ್ತಿದ್ದುದರ ಬಗ್ಗೆ ಯೋಚಿಸಲೂ ಕೂಡ ನಾವು ಸಿದ್ಧರಾಗಿರಲಿಲ್ಲ ಅಥವಾ ಬಹುಶಃ ಅದಾಗಲೇ ಎದುರಿಗೇ ನಿಂತಿದ್ದರೂ ಅದರ ಕಡೆ ನೋಡುವ ಧೈರ್ಯ ನಮ್ಮಲ್ಲಿರಲಿಲ್ಲ.

ಅದೇ ದೇಹದಲ್ಲಿ ಜೀವಿಸುವುದನ್ನು ಮುಂದುವರಿಸುತ್ತಾರೆ ಎನ್ನುವ ಭರವಸೆ ಹೊಂದಿದ್ದು ತಪ್ಪೇ? ಬಹುಶಃ ಭರವಸೆಯನ್ನು ದೇವರೇ ನಮ್ಮ ಆತ್ಮಗಳಲ್ಲಿ ಕೆತ್ತಿರಬಹುದು ಅಥವ ನಮ್ಮ ಮಿಲಿಯಾಂತರ ಹುಟ್ಟುಗಳಲ್ಲಿ ಹಲವಾರು ಅಸ್ತಿತ್ವದ ಸವಾಲುಗಳನ್ನು ಅನುಭವಿಸಿದ ನಂತರ ಉಂಟಾಗಿರುವ ಮನವರಿಕೆಯನ್ನು ಆಧರಿಸಿದ್ದಾಗಿರಬಹುದು. ಭರವಸೆಯಿಡುವುದು ಬಹುಶಃ ನಮ್ಮ ಗುಣದಲ್ಲಿಯೇ ಇರಬಹುದು.

ಕೊನೆಗೆ ನಮ್ಮ ಭರವಸೆ ಕುಸಿಯುತ್ತಿದ್ದಾಗ, ನಮ್ಮನ್ನು ಸಮಾಧಾನ ಪಡಿಸುತ್ತಾ ಋಷಿಗಳ ಕೆಲಸವನ್ನು ಮುಂದುವರಿಸಲು ನಮ್ಮನ್ನು ಉತ್ತೇಜಿಸಿದರು ಮತ್ತು ಸೂಕ್ಷ್ಮ ಮಟ್ಟದಿಂದ ನಮ್ಮಲ್ಲಿ ಪ್ರತಿಯೊಬ್ಬರನ್ನೂ ವೈಯಕ್ತಿಕವಾಗಿ ಅವರು ಮಾರ್ಗದರ್ಶಿಸುವುದಾಗಿ ವಾಗ್ದಾನ ಮಾಡಿದರು.

ಅವರ ಜೀವನದ ಮೂಲಕ ಅವರ ಕೊನೆಯುಸಿರು ಇರುವವರೆಗೂ ನಮಗೆ ಕಲಿಸುತ್ತಿದ್ದರು.

ಗುರೂಜಿಯವರಿಲ್ಲದ ಪ್ರಪಂಚವನ್ನು ಊಹಿಸುವುದೂ ಸಾಧ್ಯವಿರಲಿಲ್ಲ. ಆದರೆ, ಈ ಭೌತಿಕ ಮಟ್ಟದಲ್ಲಿ ಅವರ ಅನುಪಸ್ಥಿತಿಯನ್ನು ಒಪ್ಪಿಕೊಂಡು ಮತ್ತೊಂದು ಮಟ್ಟದಲ್ಲಿ ಅವರ ಇರವನ್ನು ಕಾಣಲು, ಅವರು ಮತ್ತೊಂದು ಮಟ್ಟದಿಂದ ನಮಗೆ ಶಕ್ತಿ ನೀಡಿದರು. ಅವರು ಕಲಿಸಿದ ಆಧ್ಯಾತ್ಮಿಕ ನಿಯಮಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರಲ್ಲಿ ಪರಿಪೂರ್ಣತೆ ಹೊಂದುವ ಪ್ರಯತ್ನವನ್ನು ಮುಂದುವರಿಸಲು ನಮ್ಮಲ್ಲಿ ಶಕ್ತಿಯನ್ನು ತುಂಬಿದರು.

ಅವರು ನಮ್ಮ ಜೀವನಕ್ಕೆ ಉದ್ದೇಶವನ್ನು ಕೊಟ್ಟರು ಮತ್ತು ಅವರೇ ನಮ್ಮ ಜೀವನದ ಉದ್ದೇಶವಾಗಿ ಮುಂದುವರಿಯುತ್ತಾರೆ. ■

## ಗುರೂಜಿ

**ವೈಶಾಲಿ ಜೋಶಿ; ಅನು: ವರ್ಷಾ ದೀಪಕ್**

ಗುರೂಜಿಯವರ ಜೀವನವು ಅನೇಕ ಪಾಠಗಳನ್ನು ನಮಗೆ ನೀಡಿದೆ. ಅದರಲ್ಲೊಂದು ಮುಖ್ಯವಾದ ಪಾಠವೆಂದರೆ, ಅವರಿಗೆ ತನ್ನ ಗುರು, ಋಷಿಗಳು ಮತ್ತು ದೇವರಲ್ಲಿದ್ದ ದೃಢವಾದ ನಂಬಿಕೆ. ಅಮರರವರು ನೀಡಿದ ಕರೆಗೆ ಪ್ರತಿಸ್ಪಂದಿಸಿ ಗುರೂಜಿಯವರು ಋಷಿಗಳ ಕೆಲಸಕ್ಕೆ ಸೇರಿದರು ಮತ್ತು ಅವರ ಕನಸುಗಳ ನೆರವೇರಿಕೆಯನ್ನು ತಮ್ಮ ಜೀವನದ ಧ್ಯೇಯವನ್ನಾಗಿಸಿಕೊಂಡರು.

ಅವರ ಜೀವನದ ಮುಖಾಂತರ, ನಂಬಿಕೆಯ ಶಕ್ತಿಯನ್ನು ನಾವೆಲ್ಲ ಅರಿತುಕೊಳ್ಳುವಂತೆ ಮಾಡಿದರು. ಹಿಂತಿರುಗಲು ಅಸಾಧ್ಯವಾದ ಮಾರ್ಗವನ್ನು ಆರಿಸಿಕೊಂಡ ನಂತರ ಅವರು ಅವಮಾನಕರ ಸಂದರ್ಭಗಳಿಗೆ, ಅಪರಿಮಿತ ಕಷ್ಟಗಳಿಗೆ ಮತ್ತು ನೋವುಗಳಿಗೆ ಒಳಗಾದಾಗ, ಅವರ ಇದೇ ನಂಬಿಕೆ ಅವರನ್ನು ದುರ್ಬಲಗೊಳ್ಳಲು ಬಿಡಲಿಲ್ಲ. ಅವರು ಏಕಾಂಗಿಯಾಗಿ ಜೀವನದಲ್ಲಿ ಸಂಘರ್ಷಿಸುತ್ತಿದ್ದಾಗ, ಎಡೆಬಿಡದೆ ಅಚಲವಾಗಿ ಉಳಿಯಲು ಬಲವನ್ನು ನೀಡಿದ್ದು ಅವರ ನಂಬಿಕೆ.

'ನಂಬಿಕೆಯನ್ನು ಹುಟ್ಟಿಸಲಾಗುವುದಿಲ್ಲ. ಅದು ನಮ್ಮಲ್ಲಿರುತ್ತದೆ ಅಥವಾ ನಮ್ಮಲ್ಲಿರುವುದಿಲ್ಲ,' ಎಂದು ಗುರೂಜಿಯವರು ಹೇಳುತ್ತಿದ್ದರು. ನಾವು ಆತ್ಮದ ಮಟ್ಟದಲ್ಲಿ ಸತ್ಯವನ್ನು ಅರಿಯುವುದು ನಮ್ಮ ಅಂತರ್‌ಗ್ರಹಣ ಶಕ್ತಿಯಿಂದ ಎಂದು ನಮಗೆ ತಿಳಿದಿದೆ. ಈ ಜ್ಞಾನವೇ ನಂಬಿಕೆಯಾಗಿದೆ ಮತ್ತು ಇಂತಹ ನಂಬಿಕೆಯನ್ನು ಅಲ್ಲಾಡಿಸಲಾಗುವುದಿಲ್ಲ. ಅದು ಯಾವಾಗಲೂ ನಮಗೆ ಸುಭದ್ರತೆಯ ಭಾವನೆಯನ್ನು ಕೊಡುತ್ತದೆ ಮತ್ತು ಇದಕ್ಕೆ ಯಾವುದೇ ಪುರಾವೆಗಳ ಅಗತ್ಯವಿಲ್ಲ. ಧ್ಯಾನಾಭ್ಯಾಸಗಳು ನಮ್ಮ ಅಂತರ್‌ಗ್ರಹಣ ಶಕ್ತಿಯನ್ನು ಚುರುಕಾಗಿಸುತ್ತವೆ, ಇದು ನಮಗೆ ಸತ್ಯವನ್ನು ಅರಿಯಲು ಸಹಕರಿಸುತ್ತದೆ.

ಸಂಪೂರ್ಣ ಶರಣಾಗತಿಯು ಈ ನಂಬಿಕೆಗೆ ಮಾನದಂಡವಾಗಿದೆ. ಗುರೂಜಿಯವರು ದೇವರಿಗೆ ಮತ್ತು ಋಷಿಗಳಿಗೆ ಶರಣಾಗತರಾಗಿದ್ದರು ಹಾಗೂ ಅವರ ದೈವೀ ಯೋಜನೆಯನ್ನು ಈ ಭೌತಿಕ ಮಟ್ಟದಲ್ಲಿ ಅಭಿವ್ಯಕ್ತಿಸುವುದಕ್ಕೆ ತಮ್ಮನ್ನು ತಾವೇ ಚಾನಲ್ ಆಗಿ ಮಾಡಿಕೊಂಡರು. ಅವರು ನಿರಂತರವಾದ ಪ್ರಯತ್ನಗಳನ್ನು ಮಾಡುತ್ತಾ, ಈ ಭೂಮಿಯ ಮೇಲೆ ಋಷಿಗಳ ಕೇಂದ್ರವನ್ನು ಸ್ಥಾಪಿಸಲು ಭೌತಿಕ, ಸೂಕ್ಷ್ಮ ಮತ್ತು ಕಾರಣಾತ್ಮಕ ಮಟ್ಟಗಳಲ್ಲೂ ಕೆಲಸಮಾಡಿದರು. ಗುರೂಜಿಯವರ ಮುಖಾಂತರ ಋಷಿಗಳು ಅಪಾರ ಪ್ರಮಾಣದ ಜ್ಞಾನವನ್ನು ಕೆಳತಂದರು, ಮಾನಸಿ ಆಧ್ಯಾತ್ಮಿಕ ವಲಯವನ್ನು ಮತ್ತು ಅವಳಿ ಕೇಂದ್ರಗಳಾದ ಮಾನಸ ಹಾಗೂ ಅಂತರ್–ಮಾನಸವನ್ನು ನಿರ್ಮಿಸಿದರು, ಮುಂದಿನ ಜನಾಂಗಕ್ಕೆ ಮಾರ್ಗದರ್ಶಿಸಬಹುದಾದ ಶಕ್ತಿಯುತವಾದ ಚೈತನ್ಯಗಳನ್ನು ಸ್ಥಾಪಿಸಿದರು, ಮತ್ತು ಬೆಳಕಿನ ಯುಗವನ್ನು ಪ್ರವೇಶಿಸಲು ಮನುಕುಲಕ್ಕೆ ಸಹಾಯಮಾಡಿದರು.

ಇಂಥ ಮಹಾನ್ ಬೆಳಕಿನ ಮಾಸ್ಟರ್ ಜೊತೆಗೆ ಕೆಲವು ಹೆಜ್ಜೆಹಾಕಲು ಸಾಧ್ಯವಾಗಿ, ಅವರನ್ನು ನಮ್ಮ ಶಾಶ್ವತ ಮಾರ್ಗದರ್ಶಿ ಬೆಳಕಾಗಿ ಪಡೆದ ನಾವು ಅತ್ಯಂತ ಅದೃಷ್ಟವಂತರು ಹಾಗೂ ಪುಣ್ಯಶಾಲಿಗಳು. ■

# ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ಸಸ್ಯರಾಶಿಗಳು ಮತ್ತು ಪ್ರಾಣಿಗಳು ಹೊಸ ಯುಗವನ್ನು ಹೇಗೆ ಸ್ವೀಕರಿಸುತ್ತಿವೆ?**

ಉ: ಹೊಸ ಯುಗದ ಚೈತನ್ಯಗಳು ಬಿಡಗಡೆ ಯಾದಾಗಲೆಲ್ಲಾ ಸಸ್ಯರಾಶಿಗಳು, ಪ್ರಾಣಿಗಳು ಹಾಗೂ ಪ್ರಕೃತಿ ಅದನ್ನು ವಿರೋಧಿಸದೆ ಸುಲಭವಾಗಿ ಒಪ್ಪಿಕೊಳ್ಳುತ್ತವೆ; ಅವು ನಿಧಾನವಾಗಿ ವಿಕಸನ ಹೊಂದುತ್ತವೆ ಅಥವಾ ಉನ್ನತ ರೂಪಕ್ಕೆ ಪರಿವರ್ತನೆ ಹೊಂದುತ್ತವೆ.

**ಪ್ರ: ಋಷಿಗಳಿಗೆ ಪ್ರಳಯ ಕಾಲವನ್ನು ತಪ್ಪಿಸುವ ಶಕ್ತಿಯಿದೆಯೇ?**

ಉ: ಇದೆ. ಆದರೆ ಪ್ರಳಯ ಇರುವುದು ನಾವು ಕಲಿಯುವುದಕ್ಕಾಗಿ ಮತ್ತು ಪರಿವರ್ತನೆ ಹೊಂದುವುದಕ್ಕಾಗಿ, ಆದಕಾರಣ ಅವರು ಪ್ರಳಯದ ಪ್ರಕ್ರಿಯೆಗಳಿಗೆ ಅನುವು ಮಾಡಿಕೊಡುತ್ತಾರೆ.

**ಪ್ರ: ನಾವು ಬೆಳಕನ್ನು ಅನುಭವಿಸುವಾಗ, ನಮ್ಮ ಶಾರೀರಿಕ ವ್ಯವಸ್ಥೆಯ ಯಾವ ಭಾಗ ಬೆಳಕಿನ ಅನುಭವವನ್ನು ಪಡೆಯುತ್ತದೆ?**

ಉ: ನಮ್ಮ ಇಡೀ ಶಾರೀರಿಕ ವ್ಯವಸ್ಥೆ ಬೆಳಕಿನ ಅನುಭವವನ್ನು ಪಡೆಯುತ್ತದೆ. ನಮ್ಮ ಶಾರೀರಿಕ ವ್ಯವಸ್ಥೆ – ದೇಹ, ಮನಸ್ಸು ಮತ್ತು ಬುದ್ಧಿಯ ಮಟ್ಟದ ಪ್ರತಿಯೊಂದು ಜೀವಕಣವೂ ಬೆಳಕಿನ ಅನುಭವವನ್ನು ಪಡೆಯುತ್ತದೆ.

**ಪ್ರ: ಸೂರ್ಯನನ್ನು ದಿಟ್ಟಿಸಿ ನೋಡುವುದರಿಂದ, ಪ್ರಾಣವನ್ನು ಅವಲಂಬಿಸಿ ಬದುಕಲು ಸಹಾಯಕವಾಗುವುದೇ?**

ಉ: ಕೆಲವೊಮ್ಮೆ ಸಹಾಯಕವಾಗುವುದು. ಅದು ನಿಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಅವಲಂಬಿಸಿದೆ. ಒಂದು ಸುಂದರ ಹಾಗೂ ಹೃದಯಸ್ಪರ್ಶಿ ವಿಷಯವೇನೆಂದರೆ, ನೀವು ಸಾಮಾನ್ಯವಾದ ಪ್ರಾಣಾಯಾಮವನ್ನು ಅಭ್ಯಾಸ ಮಾಡಿದಾಗ, ನಿಮ್ಮ ಅವಶ್ಯಕತೆಯನ್ನು ಅರಿತಿರುವ ಸೂರ್ಯ ದೇವನು ನಿಮಗೇ ಗೊತ್ತಿಲ್ಲದಂತೆ ವಿಶೇಷ ಪ್ರಾಣವನ್ನು ನಿಮಗೆ ಕೊಡುತ್ತಾನೆ.

**ಪ್ರ: ಪ್ರಾಣ ಮತ್ತು ವಿಶ್ವ ಚೈತನ್ಯಗಳ ನಡುವಿನ ವ್ಯತ್ಯಾಸವೇನು?**

ಉ: ಅವುಗಳ ಮೂಲದಲ್ಲಿ ವ್ಯತ್ಯಾಸವಿದೆ. ಪ್ರಾಣ ಸೂರ್ಯನಿಂದ ಬರುತ್ತದೆ. ವಿಶ್ವ ಚೈತನ್ಯ ವಿಶ್ವದಿಂದ ಬರುತ್ತದೆ; ಅದು ಎಲ್ಲೆಡೆಯೂ ಲಭ್ಯವಿದೆ. ನಮ್ಮ ಪೋಷಣೆಗಾಗಿ ಪ್ರಾಣ ಇದೆ. ಪ್ರಾಣ ಹೀಲ್ ಕೂಡಾ ಮಾಡುತ್ತದೆ. ಆದರೆ ವಿಶ್ವ ಚೈತನ್ಯ ನಮ್ಮನ್ನು ಪೋಷಿಸಿಕೊಳ್ಳಲು ಸಹಾಯ ಮಾಡುತ್ತದೆ, ಹೀಲ್ ಮಾಡುತ್ತದೆ ಮತ್ತು ಅದರಲ್ಲಿ ಬಹಳ ಜ್ಞಾನವೂ ಇದೆ. ಈ ವಿಶ್ವ ಚೈತನ್ಯ ಸ್ವತಃ ದೇವರೇ ಆಗಿದೆ, ಮತ್ತು ದೇವರಲ್ಲಿ ಏನಿದೆಯೋ ಅದೆಲ್ಲವೂ ಅದರಲ್ಲಿದೆ.

**ಪ್ರ: ಪ್ರಾಣದಲ್ಲಿ ಜೀವಿಸುವ ವ್ಯಕ್ತಿಗೆ ವಯಸ್ಸಾಗುವುದೇ?**

ಉ: ಹೌದು. ಆತನಿಗೂ ವಯಸ್ಸಾಗುತ್ತದೆ.

**ಪ್ರ: ನಾವು ಧ್ಯಾನ ಮಾಡಿದಾಗ ನಮ್ಮ ಕರ್ಮಗಳ ಪಥ ಬದಲಾಗುತ್ತದೆ. ಆಗ ನಮ್ಮೊಂದಿಗೆ ಸಂಪರ್ಕ ಹೊಂದಿರುವ ವ್ಯಕ್ತಿಗಳಿಗೆ ಏನಾಗುತ್ತದೆ? ಅವರ ಪಥವೂ ಬದಲಾಗುತ್ತದೆಯೇ? ಅವರ ಕರ್ಮಗಳು ಏನಾಗುತ್ತವೆ?**

ಉ: ಆತ್ಮ ಸಂಗಾತಿಗಳು ಎರಡು ದೇಹ ಒಂದು ಆತ್ಮ ಇದ್ದಂತೆ. ಆದಕಾರಣ ಆತ್ಮ ಸಂಗಾತಿಗಳಲ್ಲಿ ಒಬ್ಬರ ಪಥ ಬದಲಾದರೆ, ಮತ್ತೊಬ್ಬರ ಪಥವೂ ಬದಲಾಗುತ್ತದೆ. ಅವರಿಬ್ಬರದೂ ಒಂದೇ ಪಥವೇನೋ ಎನಿಸುವಂತಿರುತ್ತದೆ. ಆತ್ಮ ಸಂಗಾತಿಗಳಲ್ಲಿ ಮಾತ್ರ ಈ ರೀತಿಯಿರುತ್ತದೆ. ಆದರೆ, ಬೇರೆಯವರು ತಮ್ಮದೇ ಪಥದಲ್ಲಿ ಮುಂದುವರಿಯುತ್ತಾರೆ. ಇದು ಋಷಿಗಳಿಂದ ಬಂದ ಸ್ಪಷ್ಟ ಉತ್ತರ.

**ಪ್ರ: ನಾನು ಧ್ಯಾನ ಮಾಡಿದಾಗ, ಜನರ ಮತ್ತು ಜಾಗದ ಕರ್ಮಗಳನ್ನು ಕೂಡ ನಿವಾರಣೆ ಮಾಡುತ್ತೇನೆಯೇ?**

ಉ: ಹೌದು. ನೀವು ಧ್ಯಾನ ಮಾಡಿದಾಗ ಕೇವಲ ನಿಮ್ಮ ಕರ್ಮಗಳನ್ನು ಮಾತ್ರ ನಿವಾರಿಸಿಕೊಳ್ಳುವಿರಿ ಅಥವಾ ಕೇವಲ ನಿಮ್ಮ ವೈಯಕ್ತಿಕ ಆಧ್ಯಾತ್ಮಿಕ ಗುರಿಯನ್ನು ತಲುಪುವಿರಿ ಎಂದು ಭಾವಿಸಬೇಡಿ. ನಾವು ಅದಕ್ಕಿಂತಲೂ ಹೆಚ್ಚಿನದನ್ನು ಮಾಡುತ್ತೇವೆ. ನೀವು ಧ್ಯಾನ ಮಾಡುವಾಗ, ನಿಮ್ಮಿಂದ ಪ್ರೀತಿ ಮತ್ತು ಶಾಂತತೆಯ ಕಂಪನಗಳು ಉತ್ಪತ್ತಿಯಾಗುತ್ತವೆ. ನಾವು ಧ್ಯಾನ ಮಾಡಿದಾಗ, ನಮ್ಮ ಕರ್ಮಗಳು, ಜಾಗದ ಕರ್ಮಗಳು, ನಮ್ಮ ತಂದೆ ತಾಯಿಯರ ಕರ್ಮಗಳು, ಆತ್ಮ ಸಂಗಾತಿಯ ಕರ್ಮಗಳು ಮತ್ತು ಸಮಾಜದ ಕರ್ಮಗಳು ನಿವಾರಣೆಯಾಗುತ್ತವೆ. ಕೆಲವು ಸಲ ನಾವು ಬೇರೆಯವರ ಕರ್ಮಗಳನ್ನು ತೆಗೆದುಕೊಳ್ಳುತ್ತೇವೆ.

**ಪ್ರ: ಒಬ್ಬ ವ್ಯಕ್ತಿ ತನ್ನನ್ನೇ ಬೆಳಕಿಗೆ ಚಾನಲ್ ಆಗಿ ಸಮರ್ಪಿಸಿಕೊಂಡರೆ, ಕೇಳಬೇಕಾದ ಹೆಚ್ಚಿನದಿನ್ನೇನಾದರೂ ಇದೆಯೇ?**

ಉ: ಒಮ್ಮೆ ನೀವು ನಿಮ್ಮನ್ನು ಬೆಳಕಿಗೆ ಸಮರ್ಪಿಸಿಕೊಂಡಾಗ, ನೀವು ಯಾವುದನ್ನೂ ಕೇಳಬೇಕಾಗಿಲ್ಲ.

**ಪ್ರ: ಒಬ್ಬ ಲೈಟ್ ಚಾನಲ್, ಕರ್ಮಗಳ ಮತ್ತು ಆಧ್ಯಾತ್ಮಿಕ ನಿಯಮಗಳ ಬಗ್ಗೆ ಚಿಂತಿಸಬೇಕೇ?**

ಉ: ನೀವು ಚಿಂತಿಸಬೇಕಾಗಿಲ್ಲ. ನಾವು ಬೆಳಕನ್ನು ಚಾನಲ್ ಮಾಡಿದಾಗ ಕೆಲವು ಕರ್ಮಗಳು ಭಸ್ಮವಾಗುತ್ತವೆ, ನಿವಾರಣೆಯಾಗುತ್ತವೆ. ಬೆಳಕನ್ನು ಚಾನಲ್ ಮಾಡುವ ವ್ಯಕ್ತಿಯು ಸಹಜವಾಗಿ ಮತ್ತು ಅಪ್ರಯತ್ನವಾಗಿ ಎಲ್ಲಾ ಆಧ್ಯಾತ್ಮಿಕ ನಿಯಮಗಳನ್ನು ಪಾಲಿಸುತ್ತಿರುತ್ತಾನೆ.


**ಪ್ರ: ಬೆಳಕು ನಮ್ಮನ್ನು ಶಿಕ್ಷಿಸುತ್ತದೆಯೇ?**

ಉ: ಇಲ್ಲ. ನಮ್ಮದೇ ಕಾರ್ಯಗಳಿಂದ, ಭಾವೋದ್ವೇಗಗಳಿಂದ ನಮ್ಮನ್ನು ನಾವೇ ಶಿಕ್ಷಿಸಿಕೊಳ್ಳುತ್ತೇವೆ. ತಪ್ಪು ಕೆಲಸ ಕರ್ಮಗಳನ್ನು ಆಕರ್ಷಿಸುತ್ತದೆ; ಒಂದು ವೇಳೆ ನಾನೊಂದು ಅತ್ಯಂತ ಗಂಭೀರ ತಪ್ಪು ಮಾಡಿದರೆ, ಅದಕ್ಕಾಗಿ ನನಗೆ ಶಿಕ್ಷೆಯಾಗುತ್ತದೆ. ವಿಶ್ವಾತ್ಮಕ ನ್ಯಾಯ ವ್ಯವಸ್ಥೆಯೊಂದು ಕೆಲಸ ಮಾಡುತ್ತದೆ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939 - 2012)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಇ–ಮೇಲ್/ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್ ; ಅನು: ಸ್ವರ್ಣಲತಾ

ನಾನು ಮೊದಲ ಸಲ ತಪೋನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ಸಪ್ತಋಷಿಗಳ ಗುಹೆಯಲ್ಲಿ ಧ್ಯಾನ ಮಾಡುತ್ತಿದ್ದಾಗ, ಆ ಗುಹೆಯ ಸಂಪೂರ್ಣ ನೆಲವು ದಿವ್ಯವಾದ ಚೈತನ್ಯದಿಂದ ಸಮೃದ್ಧವಾಗಿ ತುಂಬಿತುಳುಕುತ್ತಾ ಮಿಡಿಯುತ್ತಿದ್ದುದನ್ನು ಕಂಡೆ. ನೆಲದ ತಳಭಾಗದಲ್ಲಿ ಚೈತನ್ಯದ ಅನೇಕ ಸುರಂಗ ಮಾರ್ಗಗಳು ಗೋಚರಿಸಿದವು. ಪ್ರಕಾಶಮಾನವಾದ ಬೆಳಕಿದ್ದ ಒಂದು ಸುರಂಗವನ್ನು ನಾನು ಪ್ರವೇಶಿಸಲು ಪ್ರಯತ್ನಿಸಿದೆ, ಆದರೆ ಅದು ಮುಚ್ಚಿತ್ತು. ನಂತರ ಬೇರೊಂದು ಸುರಂಗವನ್ನು ಪ್ರವೇಶಿಸಿದೆ, ಅದು ನನ್ನನ್ನು ಸಾಗರದ ತಳಕ್ಕೆ ಕರೆದೊಯ್ದಿತು. ಅಲ್ಲಿಂದ ನಾನು ಸಾಗರದ ಮೇಲ್ಮಟ್ಟವನ್ನು ತಲುಪಿದಾಗ ಇದ್ದಕ್ಕಿದ್ದಂತೆಯೇ ಅಲ್ಲಿ ಭಗವಾನ್ ಮಹಾವಿಷ್ಣು, ದೇವಿ ಮಹಾಲಕ್ಷ್ಮಿಯೊಂದಿಗೆ ಆದಿಶೇಷನ ಮೇಲೆ ಪವಡಿಸಿ ವಿಶ್ರಮಿಸುತ್ತಿದ್ದ ದೃಶ್ಯ ಕಾಣಿಸಿತು!

ನನ್ನ ಸಹೋದರನಿಗೆ ಅತಿಯಾದ ಅನಾರೋಗ್ಯವಿದ್ದುದರಿಂದ ಹೈದರಾಬಾದಿನ ಒಂದು ಆಸ್ಪತ್ರೆಗೆ ಅವನನ್ನು ದಾಖಲಿಸಲಾಗಿತ್ತು. ನಾನು ಅವನ ಶೀಘ್ರ ಚೇತರಿಕೆಗಾಗಿ ಕುಂಡಲಿನಿ ಗೋಪುರದಲ್ಲಿ ಕುಳಿತು ಪ್ರಾರ್ಥಿಸಿದಾಗ, ಮಹರ್ಷಿ ಅಮರರವರು ಒಂದು ವಿಷನ್‌ನಲ್ಲಿ ನನಗೆ ಕಾಣಿಸಿದರು. ನಾನು ಮನೆಗೆ ಹಿಂತಿರುಗುತ್ತಿದ್ದಾಗ, ನನ್ನ ಸಹೋದರ ಆಶ್ಚರ್ಯಕರವಾಗಿ ಚೇತರಿಸಿಕೊಂಡು, ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ಮನೆಗೆ ಹಿಂತಿರುಗಿರುವ ವಿಷಯ ತಿಳಿಯಿತು!

– ಡಿ. ಆರ್. ಸಿಂಗ್

ಗುರುಪೂರ್ಣಿಮೆಯ ದಿನದಂದು ಧ್ಯಾನ ಮಾಡುತ್ತಿದ್ದಾಗ ನನ್ನ ಶೈಕ್ಷಣಿಕ ಅಧ್ಯಯನಕ್ಕೆ ಸಂಬಂಧಿಸಿದ ಮೂವರು ಗುರುಗಳು ನನ್ನನ್ನು ಆಶೀರ್ವದಿಸಿದ ವಿಷನ್ ಕಂಡೆ. ಆ ವಿಷನ್‌ನ ಕೊನೆಯಲ್ಲಿ ನಮ್ಮ ಪ್ರೀತಿಯ ಗುರೂಜಿಯವರು ನನ್ನನ್ನು ಆಶೀರ್ವದಿಸಿದರು. ಗುರೂಜಿಯವರು ನನ್ನ ತಲೆಯ ಮೇಲೆ ಕೈಯಿಟ್ಟಾಕ್ಷಣ, ನಾನು ಅವರ ಚರಣಕಮಲಗಳಿಗೆ ನಮಸ್ಕರಿಸಿದೆ, ಆಗ ಆಶೀರ್ವಾದವನ್ನು ಮತ್ತು ಚೈತನ್ಯಗಳನ್ನು ಪಡೆದ ಅನುಭವವಾಯಿತು. ಅದೊಂದು ಅದ್ಭುತವಾದ ಅನುಭವ!

– ಸಿ. ಸ್ವಾಮಿನಾಥನ್

ಕೆಲವು ತಿಂಗಳುಗಳ ಹಿಂದೆ ಧ್ಯಾನ ಮಾಡುತ್ತಿದ್ದಾಗ, ನನ್ನ ಉಸಿರಾಟದ ವ್ಯವಸ್ಥೆಯ ಒಂದು ಭಾಗಕ್ಕೆ ಸೋಂಕು ಉಂಟಾಗಿ ಶೀತದಿಂದ ಅಡಚಣೆಯುಂಟಾಗಿದ್ದನ್ನು ನೋಡಿದೆ. ಮುಂದಿನ ವಾರದಲ್ಲೇ ನನಗೆ ಶೀತವಾಯಿತು. ಆದರೆ ಆ ಸಮಯವನ್ನು ಒಬ್ಬ ಪ್ರೇಕ್ಷಕಳಂತೆ ಕಳೆದೆ, ಅನಾರೋಗ್ಯಕ್ಕೆ ತುತ್ತಾದವಳಂತೆ ಅಲ್ಲ; ಅದು ಬೇರೆ ಯಾರಿಗೋ ಆಗುತ್ತಿದೆಯೇನೋ ಎನ್ನುವಂತೆ ಎಲ್ಲವನ್ನೂ ವೀಕ್ಷಿಸುತ್ತಿದ್ದೆ. ಬೆಳಕಿನೊಂದಿಗೆ ಶ್ರುತಿಗೊಳ್ಳುವುದರಿಂದ, ಬರೀ ನೋವಿನಿಂದ ಮಾತ್ರವಲ್ಲ ಎಂತಹ ತೊಂದರೆಗಳಿಂದಲೂ ಹೊರಬರಬಹುದೆಂಬುದು ಅರ್ಥವಾಯಿತು.

– ನಿರ್ಮಲಾ ಬಾಲ

ತಪೋನಗರದಲ್ಲಿದ್ದ ಹಿಂದಿನ ಎರಡು ದಿನಗಳಲ್ಲಿ, ಆಧ್ಯಾತ್ಮಿಕ ಮಟ್ಟದಲ್ಲಿ ಅತ್ಯಂತ ಆಳವಾದ ಎರಡು ಶಸ್ತ್ರಕ್ರಿಯೆಗೆ ನಾನು ಒಳಪಟ್ಟೆ. ಆಗ ನನ್ನ ದೇಹದಲ್ಲಿದ್ದ ಅತ್ಯಂತ ಕ್ಲಿಷ್ಟ ಮತ್ತು ಕಠಿಣವಾದ ಅಡೆತಡೆಗಳನ್ನು ತೆಗೆದುಹಾಕಲಾಯಿತು. ಈಗ ಆ ಜಾಗಗಳಲ್ಲಿ ಸಂಜೀವಿನಿಯನ್ನು ತುಂಬಿಸಲಾಗಿದೆ. ಅತ್ಯಂತ ಹಿತವಾದ ಅನುಭವ ನನಗಾಗುತ್ತಿದೆ. ಈಗ ನಾನು ಆನಂದ ಪರವಶತೆಯನ್ನು ಅನುಭವಿಸುತ್ತಿದ್ದೇನೆ. ಇಂತಹ ಉನ್ನತವಾದ ಕೃಪೆಮಾಡಿದ ಋಷಿಗಳಿಗೂ ಹಾಗೂ ಎಲ್ಲಾ ಗುರುಹಿರಿಯರಿಗೂ ನನ್ನ ವಂದನೆಗಳು!

– ಪ್ರಧಾನ್ ನಂದಕುಮಾರ್

ಇದೊಂದು ಅಪಾರವಾದ ಅರಿವುಂಟುಮಾಡುವ ಪ್ರಯಾಣವಾಗಿದೆ ಹಾಗೂ ಸತತವಾಗಿ ಕಲಿಯುವ ಅನುಭವವಾಗಿದೆ. ಇದು ಒಬ್ಬನು ತನ್ನ ಆಂತರ್ಯವನ್ನು ನೋಡುವುದನ್ನು ಮತ್ತು ತನ್ನನ್ನು ತಾನು ಬೇಷರತ್ತಾದ ಪ್ರೀತಿಯಿಂದ ತನ್ನೆಲ್ಲಾ ವಿಫಲತೆ ಹಾಗೂ ಭಯಗಳೊಂದಿಗೆ ಒಪ್ಪಿಕೊಳ್ಳುವ ಅತ್ಯಂತ ಸರಳವಾದ ಆದರೆ ಪ್ರಭಾವಶಾಲಿಯಾದ ಪಾಠವನ್ನು ನನಗೆ ಕಲಿಸಿದೆ. ಯಾರು ತಮ್ಮನ್ನು ತಾವು ಪ್ರೀತಿಸುತ್ತಾರೋ ಅವರು ಮಾತ್ರ ಎಲ್ಲರನ್ನೂ ಬೇಷರತ್ತಾಗಿ ಪ್ರೀತಿಸಲು ಸಾಧ್ಯ. ಇದೆಲ್ಲಕ್ಕೂ ಋಷಿಗಳ ಹಾಗೂ ಗುರೂಜಿಯವರ ಪ್ರೀತಿ ಮತ್ತು ಅನುಗ್ರಹವೇ ಕಾರಣ; ಗುರೂಜಿಯವರ ಅನುಪಸ್ಥಿತಿಯ ಶೂನ್ಯತೆಯನ್ನು ನಮ್ಮಿಂದ ದೂರಮಾಡಿರುವಂತಹ ಮಾನಸಕುಟುಂಬದ ಸದಸ್ಯರ ನಿರಂತರವಾದ ನಿಸ್ವಾರ್ಥ ಕಾರ್ಯಗಳಲ್ಲಿ ನಾವು ಇದನ್ನು ಸುಲಭವಾಗಿ ಕಾಣಬಹುದು.

– ಕವಿತಾ ಮಂಜುನಾಥ್

ನಾನು ಮಾನಸ ಕುಟುಂಬದ ಸದಸ್ಯನಾದ ಒಂದೂವರೆ ವರ್ಷದಲ್ಲೇ ಅಲ್ಲಿನ ಸ್ನೇಹ, ನಿಬಂಧನಾರಹಿತ ಪ್ರೀತಿ ಮತ್ತು ಪರಿಶುದ್ಧ ವಾತಾವರಣದಿಂದ ಪ್ರಭಾವಿತನಾಗಿದ್ದೇನೆ. ವಿಶ್ವಚೇತನ ಮಂದಿರ ಹಾಗೂ ಕುಂಡಲಿನಿ ಮಂದಿರಗಳು ಹೊರಸೂಸುವ ಸಕಾರಾತ್ಮಕ ಕಂಪನಗಳಿಗಾಗಿ ಅರಸಿ ಈ ಸ್ಥಳಕ್ಕೆ ಬರುವ ಬಹುತೇಕ ಅನ್ವೇಷಕರಿಗೆ, ನಿರಂತರವಾಗಿ ನಮ್ಮನ್ನು ಮಾರ್ಗದರ್ಶಿಸುತ್ತಿರುವ ಇಲ್ಲಿನ ದಿವ್ಯವಾದ ಮಾರ್ಗದರ್ಶಕರು ಇನ್ನೂ ಹೆಚ್ಚಿನ ಪ್ರೇರಣೆಯನ್ನು ನೀಡುತ್ತಾರೆ. ದೈಹಿಕವಾಗಿ ಪ್ರಕೃತಿಯು ತಡೆಯುವವರೆಗೆ ನಾನಿದನ್ನು ಅನುಭವಿಸಬೇಕೆನ್ನುವುದು ನನ್ನ ಆಶಯ.

– ಪಿ. ಚಂದ್ರಶೇಖರ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ